ಶಾಲಾ ಶಿಕ್ಷಣ ಇಲಾಖೆ

ನಲಿಕಲಿ

ಅಭ್ಯಾಸ ಸಹಿತ ಪಠ್ಯ ಪುಸ್ತಕ

ಭಾಗ – 2

ಗಣಿತ

3

ಮೂರನೇ ತರಗತಿ

NOT TO BE REPUBLISHED © KTBS


ಸಮಗ್ರ ಶಿಕ್ಷಣ, ಕರ್ನಾಟಕ
ನೃಪತುಂಗ ರಸ್ತೆ
ಬೆಂಗಳೂರು – 560 001

ಕರ್ನಾಟಕ ಪಠ್ಯಪುಸ್ತಕ ಸಂಘ
6ನೇ ಅಡ್ಡರಸ್ತೆ, ಮಲ್ಲೇಶ್ವರಂ
ಬೆಂಗಳೂರು – 560 003

ನನ್ನ ಕಲಿಕೆಯ ವಿಷಯಗಳು

5. ಕಳೆಯುವ ಮೋಜು

1 – 19






6. ಗುಣಿತದ ಕುಣಿತ

20 –36

7. ಹಂಚಿಕೊಳ್ಳೋಣ

37 – 50






8. ಪೂರ್ಣ - ಸಮಭಾಗಗಳು

51 – 62

9. ಅಳೆಯೋಣ - ಕಲಿಯೋಣ

63 – 87





10. ಮಾಹಿತಿ ಕಣಜ & ಕ. ಫಲಗಳು


88–98

NOT TO BE REPUBLISHED @KTBS

5 ಕಳೆಯುವ ಮೋಜು

5.1 ಸಮೀಕ್ಷೆ ಮಾಡೋಣ ವ್ಯತ್ಯಾಸ ತಿಳಿಯೋಣ

ಕಾಡಿನ ಎಲ್ಲ ಪ್ರಾಣಿಗಳು ಮತ್ತು ಪಕ್ಷಿಗಳು ಸೇರಿ ಕಾಡಿನ ಸಮೀಕ್ಷೆಯನ್ನು ಮಾಡಿದವು. ಹಿಂದೆ ಇದ್ದ ಪ್ರಾಣಿಗಳು ಮತ್ತು ಪಕ್ಷಿಗಳಿಗಿಂತ ಈಗಿರುವ ಪ್ರಾಣಿಗಳು ಪಕ್ಷಿಗಳು ಕಡಿಮೆಯಾಗಿವೆ. ಹಿಂದೆ ಇದ್ದ ಮರಗಳಿಗಿಂತ ಈಗ ಇರುವ ಮರಗಳ ಸಂಖ್ಯೆ ಕಡಿಮೆ ಆಗಿದೆ. ಮರಗಳ ಸಂಖ್ಯೆಯ ಕುರಿತ ವರದಿಯ ವಿವರವು ಈ ಕೆಳಗಿನಂತಿದೆ.



ಮರಗಳ ಹೆಸರು	ಹಿಂದಿನ ಸಮೀಕ್ಷೆ	ಈಗಿನ ಸಮೀಕ್ಷೆ
ಶ್ರೀಗಂಧ	756	624
ಹಲಸಿನ ಮರ	835	713
ಆಲದ ಮರ	768	501
ಬೇವಿನ ಮರ	879	626
ತೇಗದ ಮರ	626	615
ನೇರಳೆ ಮರ	882	721

@KTBS TO BE REPUBLISHED



ಶ್ರೀಗಂಧದ ಮರಗಳ ಸಂಖ್ಯೆ ಎಷ್ಟು ಕಡಿಮೆ ಆಗಿವೆ?




ಅವುಗಳ ವ್ಯತ್ಯಾಸ ಹೇಗೆ ತಿಳಿಯುವುದು?

ವಿಧಾನ–1 : ಅಬಾಕಸ್ ಚಿತ್ರ ಬಳಸಿ ವ್ಯತ್ಯಾಸ ಕಂಡುಹಿಡಿಯುವುದು.

ಮೊದಲಿದ್ದ ಶ್ರೀಗಂಧದ ಮರಗಳು = 756

ಈಗ ಇರುವ ಶ್ರೀಗಂಧದ ಮರಗಳು = 624



ಕಡಿಮೆಯಾದ ಶ್ರೀಗಂಧದ ಮರಗಳ ಸಂಖ್ಯೆ : 132


ಹಂತ–1: ಯಾವ ಸಂಖ್ಯೆಯಲ್ಲಿ ಕಳೆಯಬೇಕಾಗಿದೆಯೋ ಆ ಸಂಖ್ಯೆಯಷ್ಟು ಮಣಿಗಳ ಚಿತ್ರವನ್ನು ಸ್ಥಾನಬೆಲೆಗನುಗುಣವಾಗಿ ಅಬಾಕಸ್ ಸಾಲುಗಳಲ್ಲಿ ಬಿಡಿಸೋಣ.

ಹಂತ–2: ಯಾವ ಸಂಖ್ಯೆಯನ್ನು ಕಳೆಯಬೇಕಾಗಿದೆಯೋ ಆ ಸಂಖ್ಯೆಯಷ್ಟೆ ಅಬಾಕಸ್‌ನಲ್ಲಿನ ಮಣಿಗಳಿಗೆ ಗೀಟು ಹಾಕಿ, ಉಳಿದ ಮಣಿಗಳನ್ನು ಎಣಿಸಿ ಸ್ಥಾನಬೆಲೆಗನುಗುಣವಾಗಿ ಬರೆಯೋಣ.


@KTBS NOT TO BE REPUBLISHED

5.2 ಅಬಾಕಸ್ ಬಳಸಿ ವ್ಯತ್ಯಾಸ ಕಂಡುಹಿಡಿಯೋಣ.


1. ಮೊದಲಿದ್ದ ನೇರಳೆ ಮರಗಳು = 882
   ಈಗ ಇರುವ ನೇರಳೆ ಮರಗಳು = 721




2. ಮೊದಲಿದ್ದ ಬೇವಿನ ಮರಗಳು = 879
   ಈಗ ಇರುವ ಬೇವಿನ ಮರಗಳು = 626




3. ಮೊದಲಿದ್ದ ತೇಗದ ಮರಗಳು = 626
ಈಗ ಇರುವ ತೇಗದ ಮರಗಳು= 615




4. ಮೊದಲಿದ್ದ ಆಲದ ಮರಗಳು = 768
ಈಗ ಇರುವ ಆಲದ ಮರಗಳು= 501



5. ಮೊದಲಿದ್ದ ಹಲಸಿನ ಮರಗಳು = 835
ಈಗ ಇರುವ ಹಲಸಿನ ಮರಗಳು= 713



6. ಶ್ರೀಗಂಧದ ಮರಗಳು, ತೇಗದ ಮರಗಳಿಗಿಂತ ಎಷ್ಟು ಹೆಚ್ಚಿವೆ ?



©KTBS NOT TO BE REPUBLISHED

5.3 ವಿಧಾನ–2 : ಸ್ಥಾನಬೆಲೆ ಕೋಷ್ಟಕ ಬಳಸಿ ವ್ಯತ್ಯಾಸ ಕಂಡುಹಿಡಿಯೋಣ.

ತೇಗದ ಮರಗಳ ಸಂಖ್ಯೆಯಲ್ಲಿನ ವ್ಯತ್ಯಾಸವನ್ನು ಕಂಡುಹಿಡಿಯೋಣ.

	ನೂರು	ಹತ್ತು	ಬಿಡಿ
ಮೊದಲಿದ್ದ ತೇಗದ ಮರಗಳು	6	2	6
ಈಗ ಇರುವ ತೇಗದ ಮರಗಳು	6	1	5
ವ್ಯತ್ಯಾಸ	0	1	1

ಹಂತ–1: ಮೊದಲು ಬಿಡಿ ಸ್ಥಾನದಲ್ಲಿರುವ 6 ರಲ್ಲಿ 5 ನ್ನು ಕಳೆಯೋಣ. ಬಂದ ವ್ಯತ್ಯಾಸವನ್ನು ಬಿಡಿ ಸ್ಥಾನದ ಉತ್ತರದ ಜಾಗದಲ್ಲಿ ಬರೆಯೋಣ.

ಹಂತ–2: ನಂತರ ಹತ್ತರ ಸ್ಥಾನದಲ್ಲಿರುವ 2 ರಲ್ಲಿ 1 ನ್ನು ಕಳೆಯೋಣ. ಬಂದ ವ್ಯತ್ಯಾಸವನ್ನು ಹತ್ತರ ಸ್ಥಾನದ ಉತ್ತರದ ಜಾಗದಲ್ಲಿ ಬರೆಯೋಣ.

ಹಂತ–3: ಕೊನೆಗೆ ನೂರರ ಸ್ಥಾನದಲ್ಲಿರುವ 6 ರಲ್ಲಿ 6 ನ್ನು ಕಳೆಯೋಣ. ಬಂದ ವ್ಯತ್ಯಾಸವನ್ನು ನೂರರ ಸ್ಥಾನದ ಉತ್ತರದ ಜಾಗದಲ್ಲಿ ಬರೆಯೋಣ.

ಕಡಿಮೆಯಾದ ತೇಗದ ಮರಗಳ ಸಂಖ್ಯೆ : 011

5.4 ಮಾಡಿರುವ ಲೆಕ್ಕ ಸರಿಯಾಗಿದೆಯೇ ಎಂದು ತಿಳಿಯಲು ತಾಳೆ ನೋಡುವುದು.

	ನೂರು	ಹತ್ತು	ಬಿಡಿ
ಮೊದಲಿದ್ದ ತೇಗದ ಮರಗಳು	6	2	6
ಈಗ ಇರುವ ತೇಗದ ಮರಗಳು −	6	1	5
ವ್ಯತ್ಯಾಸ	0	1	1

	ನೂರು	ಹತ್ತು	ಬಿಡಿ
ವ್ಯತ್ಯಾಸ	0	1	1
ಈಗ ಇರುವ ತೇಗದ ಮರಗಳು +	6	1	5
ಮೊದಲಿದ್ದ ತೇಗದ ಮರಗಳು	6	2	6

5.5 ಕೊಟ್ಟಿರುವ ಲೆಕ್ಕಗಳನ್ನು ಸ್ಥಾನಬೆಲೆ ಕೋಷ್ಟಕದಲ್ಲಿ ವ್ಯತ್ಯಾಸ ಕಂಡುಹಿಡಿಯೋಣ.

	ನೂರು	ಹತ್ತು	ಬಿಡಿ
ಮೊದಲಿದ್ದ ಆಲದ ಮರಗಳು			
ಈಗ ಇರುವ ಆಲದ ಮರಗಳು −			
ವ್ಯತ್ಯಾಸ			

	ನೂರು	ಹತ್ತು	ಬಿಡಿ
ವ್ಯತ್ಯಾಸ			
ಈಗ ಇರುವ ಆಲದ ಮರಗಳು +			
ಮೊದಲಿದ್ದ ಆಲದ ಮರಗಳು			

	ನೂರು	ಹತ್ತು	ಬಿಡಿ
ಮೊದಲಿದ್ದ ನೇರಳೆ ಮರಗಳು			
ಈಗ ಇರುವ ನೇರಳೆ ಮರಗಳು −			
ವ್ಯತ್ಯಾಸ			

	ನೂರು	ಹತ್ತು	ಬಿಡಿ
ವ್ಯತ್ಯಾಸ			
ಈಗ ಇರುವ ನೇರಳೆ ಮರಗಳು +			
ಮೊದಲಿದ್ದ ನೇರಳೆ ಮರಗಳು			

@KTBS NOT TO BE REPUBLISHED

* ನನಗೆ ಅರ್ಥವಾಗಿದೆ ☐
* ನನಗೆ ಸಹಾಯ ಬೇಕಿದೆ ☐

ಶಿಕ್ಷಕರ ಸಹಿ :
ದಿನಾಂಕ :

	ನೂರು	ಹತ್ತು	ಬಿಡಿ
ಮೊದಲು ಇದ್ದ ಬೇವಿನ ಮರಗಳು			
ಈಗ ಇರುವ ಬೇವಿನ ಮರಗಳು −			
ವ್ಯತ್ಯಾಸ			

	ನೂರು	ಹತ್ತು	ಬಿಡಿ
ವ್ಯತ್ಯಾಸ			
ಈಗ ಇರುವ ಬೇವಿನ ಮರಗಳು +			
ಮೊದಲು ಇದ್ದ ಬೇವಿನ ಮರಗಳು			

	ನೂರು	ಹತ್ತು	ಬಿಡಿ
ಮೊದಲು ಇದ್ದ ಹಲಸಿನ ಮರಗಳು			
ಈಗ ಇರುವ ಹಲಸಿನ ಮರಗಳು −			
ವ್ಯತ್ಯಾಸ			

	ನೂರು	ಹತ್ತು	ಬಿಡಿ
ವ್ಯತ್ಯಾಸ			
ಈಗ ಇರುವ ಹಲಸಿನ ಮರಗಳು +			
ಮೊದಲು ಇದ್ದ ಹಲಸಿನ ಮರಗಳು			

@KTBS NOT TO BE REPUBLISHED

5.6 ಪಕ್ಷಿಗಳ ಸಮೀಕ್ಷೆ


ಗಿಳಿಯು ಸಮೀಕ್ಷೆ ಮಾಡಿ ವರದಿಯನ್ನು ಈ ಕೆಳಗಿನಂತೆ ಪಟ್ಟಿ ಮಾಡಿದೆ.

ಪಕ್ಷಿಗಳ ಹೆಸರು	ಹಿಂದಿನ ಸಮೀಕ್ಷೆ	ಈಗಿನ ಸಮೀಕ್ಷೆ
ಬೆಳ್ಳಕ್ಕಿ	725	312
ನವಿಲು	448	335
ಕೊಕ್ಕರೆ	532	401
ಪಾರಿವಾಳ	530	410
ಮರಕುಟಿಕ	782	671

ವಿಧಾನ–3: ಅಡ್ಡಸಾಲಿನಲ್ಲಿ ಬರೆದುಕೊಂಡು ವ್ಯತ್ಯಾಸ ಕಂಡುಹಿಡಿಯುವುದು



ಮೊದಲು ಇದ್ದ 725 ಬೆಳ್ಳಕ್ಕಿಗಳಲ್ಲಿ 312 ಬೆಳ್ಳಕ್ಕಿಗಳು ಉಳಿದಿವೆ. ಕಡಿಮೆಯಾದ ಬೆಳ್ಳಕ್ಕಿಗಳ ಸಂಖ್ಯೆಯನ್ನು ಲೆಕ್ಕ ಮಾಡೋಣ.



ಹಂತ 1: ಎರಡು ಸಂಖ್ಯೆಗಳಲ್ಲಿನ ಬಿಡಿ, ಹತ್ತು ಮತ್ತು ನೂರುಗಳನ್ನು ಗೆರೆ ಎಳೆದು ಗುರುತಿಸೋಣ. ಗೆರೆ ಎಳೆದು ಗುರುತಿಸಿರುವ 5ರಲ್ಲಿ 2ನ್ನು ಕಳೆಯೋಣ.

ಹಂತ 2: ಗೆರೆ ಎಳೆದು ಗುರುತಿಸಿರುವ 2 ಹತ್ತುಗಳಲ್ಲಿ 1 ಹತ್ತನ್ನು ಕಳೆಯೋಣ.

ಹಂತ 3: ಕೊನೆಗೆ ಗುರುತಿಸಿರುವ 7 ನೂರುಗಳಲ್ಲಿ 3 ನೂರು ಕಳೆಯೋಣ.

5.7 ಪಕ್ಷಿಗಳ ಸಮೀಕ್ಷೆಯನ್ನಾಧರಿಸಿ ಅಡ್ಡಸಾಲಿನಲ್ಲಿ ಬರೆದುಕೊಂಡು ಲೆಕ್ಕ ಮಾಡೋಣ.

1. ಮೊದಲು ಇದ್ದ ಕೊಕ್ಕರೆ ಮತ್ತು ಈಗ ಇರುವ ಕೊಕ್ಕರೆಗಳ ವ್ಯತ್ಯಾಸ 5 3 2 – 4 0 1 =	2. ನವಿಲುಗಳ ಸಂಖ್ಯೆ ಎಷ್ಟು ಕಡಿಮೆಯಾಗಿದೆ? 4 4 8 – 3 3 5 =
3. ಮರಕುಟಿಕಗಳ ಸಂಖ್ಯೆಯಲ್ಲಿನ ವ್ಯತ್ಯಾಸ	4. ಮೊದಲಿನ ಸಮೀಕ್ಷೆಯಲ್ಲಿನ ಪಾರಿವಾಳಗಳ ಸಂಖ್ಯೆ ಈಗಿರುವ ಪಾರಿವಾಳ ಸಂಖ್ಯೆಗಿಂತ ಎಷ್ಟು ಹೆಚ್ಚಿದೆ?

@KTBS NOT TO BE REPUBLISHED



5.8 ಪ್ರಾಣಿಗಳ ಸಮೀಕ್ಷೆ ಮಾಡಿ ವರದಿಯನ್ನು ಸಲ್ಲಿಸುತ್ತಿದ್ದೇನೆ. ವರದಿ ಈ ಕೆಳಗಿನಂತಿದೆ.

ಪ್ರಾಣಿಗಳ ಹೆಸರು	ಹಿಂದಿನ ಸಮೀಕ್ಷೆ	ಈಗಿನ ಸಮೀಕ್ಷೆ
ಹುಲಿ	317	125
ಆನೆ	457	256
ಜಿಂಕೆ	630	520
ಮೊಲ	780	712
ಚಿರತೆ	342	287



ನರಿಯಣ್ಣ, ಪ್ರಾಣಿಗಳ ಸಂಖ್ಯೆಯಲ್ಲಿನ ವ್ಯತ್ಯಾಸ ತಿಳಿಯಲು ಬೇರೆ ವಿಧಾನ ಹೇಳುವೆಯಾ?

ಸರಿ ಗಜರಾಜ, ಸ್ಥಾನಬೆಲೆ ಆಧರಿಸಿ ಸಂಖ್ಯೆಗಳನ್ನು ಬಿಡಿಸಿ ಬರೆದು ವ್ಯತ್ಯಾಸ ತಿಳಿಯುವುದನ್ನು ಹೇಳಿಕೊಡುವೆ.



@KSEEBS NOT TO BE REPUBLISHED

ವಿಧಾನ–4 : ಸಂಖ್ಯೆಗಳನ್ನು ಬಿಡಿಸಿ ಬರೆದು ವ್ಯತ್ಯಾಸ ಕಂಡುಹಿಡಿಯುವುದು


ಹಿಂದೆ ಇದ್ದ ಜಿಂಕೆಗಳು = 630 = 600 + 30 + 0


ಈಗ ಇರುವ ಜಿಂಕೆಗಳು = 520 = 500 + 20 + 0


ವ್ಯತ್ಯಾಸ = 110 = 100 + 10 + 0

ಜಿಂಕೆಗಳ ವ್ಯತ್ಯಾಸ = 110

5.9 ಎ) ಕೊಟ್ಟಿರುವ ಲೆಕ್ಕಗಳನ್ನು ಬಿಡಿಸೋಣ.







@KTBS NOT TO BE REPUBLISHED

ಬಿ) ಸಂಖ್ಯೆಗಳನ್ನು ಬಿಡಿಸಿ ಬರೆದು ವ್ಯತ್ಯಾಸ ಕಂಡುಹಿಡಿಯೋಣ.

1

	946	=		+		+		
−	805	=		+		+		
		=		+		+		

2

	777	=		+		+		
−	666	=		+		+		
		=		+		+		

3

	888	=		+		+		
−	888	=		+		+		
		=		+		+		

@KTBS NOT TO BE REPUBLISHED

5.10 ದಶಕ ಸಹಿತ ವ್ಯವಕಲನ

ಸೋನು : ನಾನು ಇಂದು ದಿನಪತ್ರಿಕೆ ಓದಿದೆ. ನಗರದಲ್ಲಿ ತುಂಬಾ ವಾಯುಮಾಲಿನ್ಯವಂತೆ.


ಮೋನು : ಓಹೋ... ಹೌದಾ!

ಸೋನು : ಹೌದು, ನಾನು ಓದಿದ ಪತ್ರಿಕೆಯಲ್ಲಿ 346 ಜನ ಅನಾರೋಗ್ಯದಿಂದ ಬಳಲುತ್ತಿದ್ದಾರಂತೆ. ಅದರಲ್ಲಿ 158 ಜನ ಆಸ್ಪತ್ರೆಗೆ ದಾಖಲಾಗಿದ್ರಂತೆ.

ಪಿಂಕಿ : ಹೌದು, 158 ಜನ ಆಸ್ಪತ್ರೆಗೆ ದಾಖಲಾದರೆ, ಆಸ್ಪತ್ರೆಗೆ ದಾಖಲಾಗದ ಜನರೆಷ್ಟು?

ಮೋನು : ಅಂದಾಜು 200 ಜನ.

ವಿಧಾನ : ಬ್ಲಾಕ್ ಬಳಸಿ ವ್ಯತ್ಯಾಸ ಕಂಡು ಹಿಡಿಯುವುದು.



ಆಸ್ಪತ್ರೆಗೆ ದಾಖಲಾಗದವರು – 188 ಜನ

ಹಂತ 1: ಬಿಡಿ ಸ್ಥಾನದಲ್ಲಿರುವ 6 ರಿಂದ 8 ನ್ನು ಕಳೆಯಲು ಸಾಧ್ಯವಿಲ್ಲ.

* ಹತ್ತರ ಸ್ಥಾನದಿಂದ 1 ಹತ್ತನ್ನು ಬಿಡಿ ಸ್ಥಾನಕ್ಕೆ ದಶಕ ತೆಗೆದುಕೊಳ್ಳೋಣ
* ಬಿಡಿ ಸ್ಥಾನಕ್ಕೆ ಪಡೆದ 1 ಹತ್ತರ ಬ್ಲಾಕ್ 10 ಬಿಡಿ ಬ್ಲಾಕ್‌ಗಳಿಗೆ ಸಮ. ಈಗ 16 ಬಿಡಿ ಬ್ಲಾಕ್‌ಗಳಲ್ಲಿ 8 ಬಿಡಿಬ್ಲಾಕ್‌ಗಳಿಗೆ ಗೆರೆ ಹಾಕೋಣ.
* ಉಳಿದ ಬ್ಲಾಕ್‌ಗಳನ್ನು ಎಣಿಸಿ ಬಿಡಿ ಸ್ಥಾನದ ಉತ್ತರದ ಜಾಗದಲ್ಲಿ ಬರೆಯೋಣ

ಹಂತ 2: ನಂತರ ಹತ್ತರ ಸ್ಥಾನದಲ್ಲಿ ಉಳಿದ 3 ರಿಂದ 5 ಕಳೆಯಲು ಸಾಧ್ಯವಿಲ್ಲ.

* ನೂರರ ಸ್ಥಾನದಿಂದ 1 ನೂರರ ಬ್ಲಾಕನ್ನು ಹತ್ತರ ಸ್ಥಾನಕ್ಕೆ ಪಡೆದು ಬರೆಯೋಣ. 1 ನೂರರ ಬ್ಲಾಕ್ 10 ರ ಹತ್ತು ಬ್ಲಾಕ್‌ಗಳಿಗೆ ಸಮ.
* ಈಗ ಹತ್ತರ 13 ಬ್ಲಾಕ್‌ಗಳಲ್ಲಿ 5 ಬ್ಲಾಕ್‌ಗಳಿಗೆ ಗೆರೆ ಹಾಕೋಣ.
* ಉಳಿದ ಬ್ಲಾಕ್‌ಗಳನ್ನು ಎಣಿಸಿ ಹತ್ತರ ಸ್ಥಾನದ ಉತ್ತರದ ಜಾಗದಲ್ಲಿ ಬರಿಯೋಣ

ಹಂತ 3: ಕೊನೆಗೆ ನೂರರ ಸ್ಥಾನದಲ್ಲಿ ಉಳಿದ ನೂರರ ಎರಡು ಬ್ಲಾಕ್‌ಗಳಲ್ಲಿ ಒಂದು ಬ್ಲಾಕ್‌ಗೆ ಗೆರೆ ಹಾಕೋಣ. ಉಳಿದ ಬ್ಲಾಕ್‌ಗಳನ್ನು ಎಣಿಸಿ ಬರೆಯೋಣ

@KTBS NOT TO BE REPUBLISHED

5.11 ಕೊಟ್ಟಿರುವ ಲೆಕ್ಕಗಳನ್ನು ಡೀನ್ಸ್ ಬ್ಲಾಕ್ ಬಳಸಿ ಬಿಡಿಸೋಣ

1. 723 – 545 =

	ನೂ	ಹ	ಬಿ			
	7	2	3			
–	5	4	5			

2. 752 – 213 =

	ನೂ	ಹ	ಬಿ			
	7	5	2			
–	2	1	3			

3. 436 – 129 =

	ನೂ	ಹ	ಬಿ			
	4	3	6			
–	1	2	9			

@KTBS NOT TO BE REPUBLISHED

* ನನಗೆ ಅರ್ಥವಾಗಿದೆ ☐
* ನನಗೆ ಸಹಾಯ ಬೇಕಿದೆ ☐

ಶಿಕ್ಷಕರ ಸಹಿ :
ದಿನಾಂಕ :

5.12 ವಿಧಾನ–2 : ಸ್ಥಾನಬೆಲೆ ಕೋಷ್ಟಕ ಬಳಸಿ ವ್ಯತ್ಯಾಸ ಕಂಡುಹಿಡಿಯೋಣ.

ರೇಣುಕಾ ₹ 835 ಗಳಲ್ಲಿ ₹ 246 ಗಳನ್ನು ಖರ್ಚು ಮಾಡಿದಳು. ಅವಳ ಬಳಿ ಉಳಿದ ಹಣವೆಷ್ಟು ?

₹ 835 – ₹ 246

	ನೂರು	ಹತ್ತು	ಬಿಡಿ
	~~8~~ 7	10 ~~3~~ 2	10 5
–	2	4	6
	5	8	9

ರೇಣುಕಾಳ ಬಳಿ ಉಳಿದ ಹಣ = ₹ 589

ಹಂತ–1 : ಸಂಖ್ಯೆಗಳನ್ನು ಸ್ಥಾನಬೆಲೆಗೆ ಅನುಗುಣವಾಗಿ ಬರೆಯೋಣ.

ಹಂತ–2 : ಬಿಡಿ ಸ್ಥಾನದಲ್ಲಿರುವ 5 ರಲ್ಲಿ 6 ನ್ನು ಕಳೆಯಲು ಸಾಧ್ಯವಿಲ್ಲ, ಹತ್ತರ ಸ್ಥಾನದಿಂದ ದಶಕ ಪಡೆಯೋಣ. ಈಗ 15 ರಲ್ಲಿ 6 ನ್ನು ಕಳೆಯೋಣ.

ಹಂತ–3 : ಹತ್ತರ ಸ್ಥಾನದಲ್ಲಿ ಉಳಿದ 2 ರಲ್ಲಿ 4ನ್ನು ಕಳೆಯಲು ಸಾಧ್ಯವಿಲ್ಲ. ನೂರರ ಸ್ಥಾನದಿಂದ ದಶಕ ಪಡೆಯೋಣ. 12ರಲ್ಲಿ 6 ನ್ನು ಕಳೆಯೋಣ.

ಹಂತ–4 : ನೂರರ ಸ್ಥಾನದಲ್ಲಿರುವ 7 ರಲ್ಲಿ 2ನ್ನು ಕಳೆಯೋಣ. ಬಂದ ವ್ಯತ್ಯಾಸವನ್ನು ಉತ್ತರದ ಜಾಗದಲ್ಲಿ ಬರೆಯೋಣ.

@KTBS NOT TO BE REPUBLISHED

5.13 ಕೊಟ್ಟಿರುವ ಲೆಕ್ಕಗಳನ್ನು ಬಿಡಿಸಿ ವ್ಯತ್ಯಾಸ ಕಂಡುಹಿಡಿಯೋಣ.

	ನೂ	ಹ	ಬಿ
	5	3	6
	2	1	8
–			

	ನೂ	ಹ	ಬಿ
	7	3	3
	5	0	5
–			

5.14 ವಿಧಾನ–3 : ಬಿಡಿಸಿ ಬರೆದು ವ್ಯತ್ಯಾಸ ಕಂಡುಹಿಡಿಯೋಣ

ಹರ್ಷಿತಾ ತನ್ನ ಬಳಿ ಇದ್ದ ₹ 365 ರಲ್ಲಿ ಅಕ್ಷರಾಳಿಗೆ ₹ 286 ನ್ನು ಕೊಟ್ಟಳು. ಅವಳ ಬಳಿ ಉಳಿದ ಹಣವೆಷ್ಟು ?

ಹಂತ–1: ಸಂಖ್ಯೆಗಳನ್ನು ಸ್ಥಾನಬೆಲೆ ಅನುಗುಣವಾಗಿ ಬಿಡಿಸಿ ಬರೆಯೋಣ

ಹಂತ–2: ಬಿಡಿ ಸ್ಥಾನದಲ್ಲಿ 5ರಿಂದ 6ರನ್ನು ಕಳೆಯಲು ಸಾಧ್ಯವಿಲ್ಲ. ಹತ್ತರ ಗುಂಪಿನಿಂದ 1 ಹತ್ತನ್ನು ಬಿಡಿ ಸ್ಥಾನಕ್ಕೆ ದಶಕ ತೆಗೆದುಕೊಳ್ಳೋಣ. ಈಗ 15 ಬಿಡಿಗಳಲ್ಲಿ 6 ಬಿಡಿಗಳನ್ನು ಕಳೆಯೋಣ.

ಹಂತ–3: ಉಳಿದ 50 ರಲ್ಲಿ 80ನ್ನು ಕಳೆಯಲು ಸಾಧ್ಯವಿಲ್ಲ. ನೂರರ ಗುಂಪಿನಿಂದ 1ನೂರನ್ನು ಹತ್ತರ ಸ್ಥಾನಕ್ಕೆ ದಶಕ ತೆಗೆದುಕೊಳ್ಳೋಣ. ಈಗ 150 ರಲ್ಲಿ 80 ನ್ನು ಕಳೆಯೋಣ.

ಹಂತ–4: ಕೊನೆಗೆ ಉಳಿದ 200ರಲ್ಲಿ 200ನ್ನು ಕಳೆಯೋಣ.

100 10

365 = ~~300~~ 200 + ~~60~~ 50 + 5

− 286 = 200 + 80 + 6

079 = 000 + 70 + 9

ಹರ್ಷಿತಾ ಬಳಿ ಉಳಿದ ಹಣ = ₹ 79

© KTBS NOT TO BE REPUBLISHED

5.15 ಸಂಖ್ಯೆಗಳನ್ನು ಬಿಡಿಸಿ ಬರೆದು ವ್ಯತ್ಯಾಸ ಕಂಡು ಹಿಡಿಯೋಣ.

1. 835 – 627 =

835 = ◯ + ◯ + ◯

627 = ◯ + ◯ + ◯

− ———————

◯ = ◯ + ◯ + ◯

2. 662 – 475 =

2)

662	=		+		+	
–475	=		+		+	
	=		+		+	


@KTBS NOT TO BE REPUBLISHED

5.16 ವಿಧಾನ–4 : ಅಡ್ಡ ಸಾಲಿನಲ್ಲಿ ಬರೆದು ವ್ಯತ್ಯಾಸ ಕಂಡುಹಿಡಿಯೋಣ.



ಸೋನು : ನಮ್ಮ ತಂಡ 235 ರನ್ ಗಳಿಸಿದೆ. ಮೋನು ತಂಡ 175 ರನ್ ಗಳಿಸಿದೆ. ಮೋನು ತಂಡ ಗೆಲ್ಲಲು ಇನ್ನು ಎಷ್ಟು ರನ್ ಗಳಿಸಬೇಕು ?

ಪಿಂಕು : ನಾನು ಅಡ್ಡಸಾಲಿನಲ್ಲಿ ಸಂಖ್ಯೆಗಳನ್ನು ಬರೆದುಕೊಂಡು ಲೆಕ್ಕ ಮಾಡಿ ಹೇಳುವೆ.



ಗೆಲ್ಲಲು ಬೇಕಾದ ರನ್ = 60

ಹಂತ–1: ಗೆರೆ ಎಳೆದು ಗುರುತಿಸಿದಂತೆ ಬಿಡಿಯಿಂದ ಕಳೆಯಲು ಆರಂಭಿಸೋಣ. ಹೀಗೆ ಹತ್ತರ ಮತ್ತು ನೂರರ ಸ್ಥಾನದಲ್ಲಿನ ಸಂಖ್ಯೆಗಳನ್ನು ಕಳೆಯೋಣ ದಶಕ ಅವಶ್ಯವಿದ್ದಾಗ ಹಿಂದಿನ ಸ್ಥಾನದಿಂದ ದಶಕ ಪಡೆಯೋಣ.

ಹಂತ–2: ಬಂದ ವ್ಯತ್ಯಾಸವನ್ನು ಕೊಟ್ಟಿರುವ ಜಾಗದಲ್ಲಿ ಬರೆಯೋಣ.


5.17 ಅಡ್ಡಸಾಲಿನಲ್ಲಿ ಸಂಖ್ಯೆಗಳನ್ನು ಬರೆದುಕೊಂಡು ವ್ಯತ್ಯಾಸ ಕಂಡು ಹಿಡಿಯೋಣ.

1) 438 – 229 =	2) 394 – 228 =
3) 891 – 327 =	4) 452 – 358 =

@KTBS NOT TO BE REPUBLISHED

5) 121 – 97 —— ——	6) 362 – 069 —— ——

5.18 ಕೂಡಿಸುವುದು ಮತ್ತು ಕಳೆಯುವುದರ ನಡುವಿನ ಸಹಸಂಬಂಧ



© KLEBS NOT TO BE REPUBLISHED

ಅನು : ಇಲ್ಲ, ಇನ್ನೂ ₹ 220 ಉಳಿದಿದೆ.

ಮೋನು : ಹಾಗಿದ್ದರೆ ಮನೆಯವರು ಕೊಟ್ಟ ಹಣವೆಷ್ಟು ?

ಅನು : ನೋಡು, ನನ್ನ ಹತ್ತಿರ ಉಳಿದ ಹಣ ₹ 220
ಖರ್ಚು ಮಾಡಿದ ಹಣ + ₹ 230
——————
ಮನೆಯವರು ಕೊಟ್ಟ ಹಣ = ₹ 450


ಮೋನು : 450 ರೂಪಾಯಿಗಳಲ್ಲಿ ₹ 230 ಖರ್ಚು ಮಾಡಿದರೆ, ನಿನ್ನ ಹತ್ತಿರ ಉಳಿದ ಹಣ ಸರಿ ಇದೆಯೆ?

ಅನು :
ಒಟ್ಟು ಹಣ = ₹ 450
ಖರ್ಚು ಮಾಡಿದ ಹಣ = – ₹ 230

ಉಳಿದ ಹಣ = ₹ 220 ಸರಿ ಇದೆ ಮೋನು.

ಮೋನು : ಅನು ನಿನಗೆ ಗೊತ್ತಾ? ಕೂಡಿಸುವುದು ಮತ್ತು ಕಳೆಯುವುದು ಹೇಗೆ ಸಹಸಂಬಂಧ ಹೊಂದಿದೆ ಎಂಬುದು.

ಅನು : ಹೌದು, ಅವು ವಿರುದ್ಧ ಕ್ರಿಯೆಗಳು.



220 + 230 = 450

450 – 230 = 220

5.20 ಲೆಕ್ಕ ಹಾಕೋಣ :

1. ದಿನವಾರು ಮಾರಾಟ ಮಾಡಿದ ಮತ್ತು ಉಳಿದ ಕಿನ್ನಾಳದ ಗೊಂಬೆಗಳ ಸಂಖ್ಯೆಗಳನ್ನು ಲೆಕ್ಕ ಹಾಕಿ ಬರೆಯೋಣ.

ದಿನ	ಕಿನ್ನಾಳದ ಗೊಂಬೆಗಳ ಸಂಖ್ಯೆ	ಮಾರಿದ ಗೊಂಬೆಗಳ ಸಂಖ್ಯೆ	ಉಳಿದ ಗೊಂಬೆಗಳ ಸಂಖ್ಯೆ
ಸೋಮವಾರ	532	470	
ಮಂಗಳವಾರ	675	548	
ಬುಧವಾರ	974		289
ಗುರುವಾರ	865		361
ಶುಕ್ರವಾರ		504	361

@KTBS NOT TO BE REPUBLISHED

2. ಸರಕಾರಿ ಶಾಲೆಯೊಂದರಲ್ಲಿ 300 ಕೆ.ಜಿ ಅಕ್ಕಿ ಇದೆ. ದಿನವಾರು ಬಳಸಿ ಉಳಿದ ಅಕ್ಕಿ ಎಷ್ಟು? ಲೆಕ್ಕ ಮಾಡೋಣ.

ಒಟ್ಟು ಅಕ್ಕಿ 300 ಕೆಜಿ	ಬಳಸಿದ ಅಕ್ಕಿ	ಉಳಿಕೆಯಾದ ಅಕ್ಕಿ
ಮೊದಲ ದಿನ ಬಳಸಿದ ಅಕ್ಕಿ	50 kg	250
ಎರಡನೇ ದಿನ ಬಳಸಿದ ಅಕ್ಕಿ	70 kg	
ಮೂರನೇ ದಿನ ಬಳಸಿದ ಅಕ್ಕಿ	90 kg	
ಒಟ್ಟು ಅಕ್ಕಿ		

3. ತಾಯಿ ಆಮೆಗೆ 150 ವಯಸ್ಸು ಆಗಿದೆ, ಮರಿ ಆಮೆಗೆ 45 ವಯಸ್ಸಾಗಿದೆ, ಮರಿ ಆಮೆ ತಾಯಿಗಿಂತ ಎಷ್ಟು ವರ್ಷ ಚಿಕ್ಕದಾಗಿದೆ?

ತಾಯಿ ಆಮೆಯ ವಯಸ್ಸು	
ಮರಿ ಆಮೆಯ ವಯಸ್ಸು	
ವ್ಯತ್ಯಾಸ	

4. ಹರ್ಷಿತಾ 257 ಪುಟಗಳಿರುವ ಪುಸ್ತಕದಲ್ಲಿ 152 ಪುಟಗಳನ್ನು ಓದಿದ್ದಾಳೆ. ಅವಳು ಪುಸ್ತಕ ಪೂರ್ಣಗೊಳಿಸಲು ಇನ್ನೂ ಎಷ್ಟು ಪುಟಗಳನ್ನು ಓದಬೇಕು?

ಪುಸ್ತಕದಲ್ಲಿರುವ ಒಟ್ಟು ಪುಟಗಳ ಸಂಖ್ಯೆ =

ಓದಿದ ಪುಟಗಳ ಸಂಖ್ಯೆ =


ಓದಬೇಕಾದ ಪುಟಗಳ ಸಂಖ್ಯೆ =

5. ಅನು 875 ಅಂಚೆ ಚೀಟಿಗಳನ್ನು ಸಂಗ್ರಹಿಸಬೇಕಾಗಿದೆ. ಪ್ರಸ್ತುತ 673 ಅಂಚೆ ಚೀಟಿಗಳನ್ನು ಸಂಗ್ರಹಿಸಿದ್ದಾಳೆ. ಹಾಗಾದರೆ ಸಂಗ್ರಹ ಪೂರ್ಣಗೊಳಿಸಲು ಇನ್ನು ಎಷ್ಟು ಅಂಚೆ ಚೀಟಿ ಬೇಕಾಗುತ್ತದೆ?


NOT TO BE REPUBLISHED @KTBS

6. ಯೋಚಿಸಿ ಲೆಕ್ಕ ಮಾಡಿರಿ.

1.



2.



7. ಅಕ್ಷರಗಳಿಗೆ ನೀಡಿದ ಅಂಕಿಗಳನ್ನು ಬರೆದುಕೊಂಡು ವ್ಯತ್ಯಾಸ ಕಂಡುಹಿಡಿಯೋಣ.

S U B T R A C T I O N

7 8 9 5 4 0 3 5 2 1 6

SUB		TRA	
TRA	–	CTI	–

C O A P T E S B I N

8 9 4 7 3 5 0 2 6 1

C A T		P E T	
B A T	–	B I N	–

@KTBS NOT TO BE REPUBLISHED

6 ಗುಣಿತದ ಕುಣಿತ

6.1 ಮಂಗಣ್ಣನ ತೋಟ

ಮಂಗಣ್ಣ ಒಂದು ಎಕರೆ ಜಮೀನಿನಲ್ಲಿ ತೆಂಗಿನ ಮರಗಳನ್ನು ಬೆಳೆಸಿದ್ದಾನೆ. ಗೆಳೆಯ ಕಪ್ಪೆರಾಯ ತೋಟ ನೋಡಲು ಬಂದನು.



ಕಪ್ಪೆರಾಯ: ಅಬ್ಬಾ! ತೆಂಗಿನ ಮರಗಳು ತುಂಬಾ ಚೆನ್ನಾಗಿ ಬೆಳೆದಿವೆ.

ಮಂಗಣ್ಣ: ಹೌದು. ಪ್ರತಿ ಸಾಲಿನಲ್ಲಿ 10 ತೆಂಗಿನ ಮರಗಳಂತೆ 5 ಸಾಲುಗಳಿವೆ.

ಕಪ್ಪೆರಾಯ: ಹಾಗಾದರೆ ಒಟ್ಟು ಎಷ್ಟು ಮರಗಳಿವೆ?

ಮಂಗಣ್ಣ: 10 + 10 + 10 + 10 + 10 = 50 ಮರಗಳು.

10 ಎಂಬುವುದು 5 ಸಲ ಪುನರಾವರ್ತಿಸಲ್ಪಟ್ಟಿದೆ. ಅಂದರೆ 50 ಒಟ್ಟು ತೆಂಗಿನ ಮರಗಳು 50



ಕಪ್ಪೆರಾಯ: ತೆಂಗಿನ ಮರಗಳಲ್ಲಿ ಫಸಲು ಚೆನ್ನಾಗಿ ಬಂದಿದೆ.


ಮಂಗಣ್ಣ: ಹೌದು, ಇಲ್ಲೇ ಇವೆ ನೋಡು ಕಪ್ಪೆರಾಯ.



ಕಪ್ಪೆರಾಯ: ಎಷ್ಟು ತೆಂಗಿನಕಾಯಿಗಳು ಸಿಕ್ಕಿವೆ?

ಮಂಗಣ್ಣ: ಸಿಕ್ಕ ತೆಂಗಿನಕಾಯಿಗಳನ್ನು ತಲಾ 4ರಂತೆ 6 ಗುಂಪುಗಳಲ್ಲಿ ಇಡಲಾಗಿದೆ. ನೀನೆ ಎಣಿಸಿ ಹೇಳು.

ಕಪ್ಪೆರಾಯ: ಮಂಗಣ್ಣ, ಇದನ್ನೇ ಸರಳ ವಿಧಾನದಲ್ಲಿ ಲೆಕ್ಕ ಹಾಕಬಹುದು.



4 ತೆಂಗಿನ ಕಾಯಿಗಳಂತೆ 6 ಗುಂಪುಗಳು ಅಂದರೆ

$4 + 4 + 4 + 4 + 4 + 4 = 24$

$4 \times 6 = 24$ ತೆಂಗಿನ ಕಾಯಿಗಳು.

ಮಂಗಣ್ಣ: ಓ! ನೆನಪಾಯ್ತು. **ಕೂಡುವುದರ ಸುಲಭ ರೂಪವೇ ಗುಣಾಕಾರ. ಅಂದರೆ ಪುನರಾವರ್ತಿತ ಸಂಕಲನವೇ 'ಗುಣಾಕಾರ'.**

$$4 \times 6 = 24$$

ಗುಣ್ಯ ಗುಣಕ ಗುಣಲಬ್ಧ

© KTBS NOT TO BE REPUBLISHED

6.2 ಸಮಸ್ಯೆಗಳನ್ನು ಬಿಡಿಸೋಣ.

1. ಶಿಕ್ಷಕರು ಒಬ್ಬ ವಿದ್ಯಾರ್ಥಿಗೆ 6 ನೋಟ್ ಪುಸ್ತಕಗಳು ಬರುವಂತೆ 5 ವಿದ್ಯಾರ್ಥಿಗಳಿಗೆ ಹಂಚಿದರು. ಹಾಗಾದರೆ ಶಿಕ್ಷಕರು ಹಂಚಿದ ಒಟ್ಟು ನೋಟ್ ಪುಸ್ತಕಗಳು ಎಷ್ಟು?

ಶಿಕ್ಷಕರು ತಂದ ಒಟ್ಟು ನೋಟ್ ಪುಸ್ತಕಗಳ ಸಂಖ್ಯೆ

_____ + _____ + _____ + _____+_____ =_____

ಅಂದರೆ _____ × _____ = _____ ಪುಸ್ತಕಗಳು.

2. ಸರಳಾ ಲಡ್ಡುಗಳನ್ನು ಟ್ರೇನಲ್ಲಿ ಈ ರೀತಿ ಜೋಡಿಸಿದ್ದಾಳೆ. ಗಮನಿಸಿ ಉತ್ತರಿಸೋಣ.



ಒಂದು ಟ್ರೇನಲ್ಲಿ ಇಟ್ಟಿರುವ ಲಡ್ಡುಗಳು $5 \times 2 =$ _____

ಅಂತಹ 5 ಟ್ರೇಗಳಲ್ಲಿ ಇರುವ ಲಡ್ಡುಗಳು $10 \times 5 =$ _____

3. ಹರೀಶ ಮತ್ತು ಹರಿಣಿ ತಮ್ಮ ಶಾಲೆಯ ಕಪಾಟಿನಲ್ಲಿ ಪುಸ್ತಕಗಳನ್ನು ಹೀಗೆ ಜೋಡಿಸಿದ್ದಾರೆ. ಒಟ್ಟು ಎಷ್ಟು ಪುಸ್ತಕಗಳಿವೆ? ಇಲ್ಲಿರುವ ಪುಸ್ತಕಗಳನ್ನು ಬೇರೆ ವಿಧಾನಗಳಲ್ಲಿ ಹೇಗೆ ಜೋಡಿಸಬಹುದು? ಖಾಲಿ ಕಪಾಟಿನಲ್ಲಿ ಚಿತ್ರ ಬಿಡಿಸೋಣ.




ಒಟ್ಟು ಪುಸ್ತಕಗಳು ☐



@KSEEB NOT TO BE REPUBLISHED

6.3 ಮಗ್ಗಿ ರಚನೆ


ಈಗಾಗಲೇ 5ರವರೆಗೆ ಗುಣಾಕಾರ ಮಗ್ಗಿಗಳನ್ನು ರಚಿಸಿದ್ದೀರಿ. ಇದರಲ್ಲಿ 2 ಮತ್ತು 5 ರ ಮಗ್ಗಿಯನ್ನು ಬಳಸಿಕೊಂಡು 7ರ ಗುಣಾಕಾರ ಮಗ್ಗಿಯನ್ನು ರಚಿಸೋಣ.




7ರ ಮಗ್ಗಿ ರಚಿಸಲು, 2 ಮತ್ತು 5ರ ಮಗ್ಗಿಗಳ ಬಾಕ್ಸ್‌ನಲ್ಲಿರುವ ಸಂಖ್ಯೆಗಳನ್ನು ಕೂಡಿಸಿದೆ.

©KSEEBS NOT TO BE REPUBLISHED


1) 4 ಮತ್ತು 2ರ ಮಗ್ಗಿ ಬಳಸಿ 6 ರ ಮಗ್ಗಿ ರಚಿಸೋಣ.



2) 7 ಮತ್ತು 3ರ ಮಗ್ಗಿ ಬಳಸಿ 10 ರ ಮಗ್ಗಿ ರಚಿಸೋಣ.



3) ಮರದ ರೆಂಬೆಗಳಲ್ಲಿರುವ ಗುಣಾಕಾರ ಲೆಕ್ಕಗಳನ್ನು ಪೂರ್ಣಗೊಳಿಸೋಣ.




© KTBS NOT TO BE REPUBLISHED

6.4 ಎರಡಂಕಿ ಗುಣಾಕಾರ

ಸಹನಾ ಮತ್ತು ಚಿಂಟು ಬುಟ್ಟಿಗಳಲ್ಲಿರುವ ಗುಲಾಬಿ ಹೂವುಗಳನ್ನು ಎಣಿಸುತ್ತಿದ್ದಾರೆ.



ವಿಧಾನ–1:




ಹಂತ–1: ಒಂದು ಬುಟ್ಟಿಯಲ್ಲಿರುವ ಹೂವುಗಳ ಸಂಖ್ಯೆಯನ್ನು ಸ್ಥಾನ ಬೆಲೆಗನುಗುಣವಾಗಿ ಬರೆದುಕೊಳ್ಳೋಣ. ಬುಟ್ಟಿಗಳ ಸಂಖ್ಯೆಯನ್ನು 24ರ ಕೆಳಗೆ ಬಿಡಿ ಸ್ಥಾನದಲ್ಲಿ ಬರೆದುಕೊಳ್ಳೋಣ.

* 7 ರಿಂದ 4 ನ್ನು ಗುಣಿಸೋಣ. $7 \times 4 = 28$ (2 ಹತ್ತು 8 ಬಿಡಿಗಳು)

ಇದರಲ್ಲಿ 2 ನ್ನು ಹತ್ತರ ಸ್ಥಾನಕ್ಕೆ ದಶಕ ಕೊಡೋಣ. 8 ಬಿಡಿಗಳನ್ನು ಉತ್ತರದ ಜಾಗದಲ್ಲಿ ಬರೆಯೋಣ.


ಹಂತ–2: 7 ರಿಂದ 2 ನ್ನು ಗುಣಿಸೋಣ. $7 \times 2 = 14$ (1 ಹತ್ತು 4 ಬಿಡಿಗಳು) ಇದಕ್ಕೆ ದಶಕ 2ನ್ನು ಕೂಡಿಸಬೇಕು. (14 + ದಶಕ 2 = 16) 16ನ್ನು ಉತ್ತರದ ಜಾಗದಲ್ಲಿ ಬರೆಯೋಣ.



NOT TO BE REPUBLISHED ©KTBS

6.5 ಸಮಸ್ಯೆ ಬಿಡಿಸೋಣ :

1. ಒಂದು ಪ್ಯಾಕೇಟ್‌ನಲ್ಲಿ 38 ಮೇಣದ ಬತ್ತಿಗಳಿವೆ. ಹಾಗಾದರೆ 6 ಪ್ಯಾಕೆಟ್‌ಗಳಲ್ಲಿರುವ ಒಟ್ಟು ಮೇಣದ ಬತ্তಿಗಳೆಷ್ಟು?




ಒಂದು ಪ್ಯಾಕೇಟ್‌ನಲ್ಲಿರುವ ಮೇಣದ ಬತ್ತಿಗಳು = 38

ಪ್ಯಾಕೇಟುಗಳ ಸಂಖ್ಯೆ = 6

ಎಲ್ಲಾ ಪ್ಯಾಕೇಟ್‌ಗಳಲ್ಲಿನ ಒಟ್ಟು ಮೇಣದ ಬತ್ತಿಗಳು = ☐

2. ದಾಳಿಂಬೆ ಹಣ್ಣಿನ 4 ಚೀಲಗಳಿವೆ. ಪ್ರತಿ ಚೀಲದಲ್ಲಿ 75 ದಾಳಿಂಬೆ ಹಣ್ಣುಗಳಿವೆ. ಹಾಗಾದರೆ ಒಟ್ಟು ದಾಳಿಂಬೆ ಹಣ್ಣುಗಳ ಸಂಖ್ಯೆ ಎಷ್ಟು?



ಒಂದು ಚೀಲದಲ್ಲಿರುವ ದಾಳಿಂಬೆ ಹಣ್ಣುಗಳು = 75

ಚೀಲಗಳ ಸಂಖ್ಯೆ = 4

ಒಟ್ಟು ದಾಳಿಂಬೆ ಹಣ್ಣುಗಳು = ☐

3. ಗುಣಲಬ್ಧ ಕಂಡುಹಿಡಿಯೋಣ :

1.	2.	3.
88	63	72
×6	×4	×7
———	———	———
———	———	———

@KTBS NOT TO BE REPUBLISHED

6.6 ವಿಧಾನ–2:

ಒಂದು ಪುಸ್ತಕದ ಬೆಲೆ 31 ರೂಪಾಯಿಗಳಾದರೆ 26 ಪುಸ್ತಕಗಳ ಒಟ್ಟು ಬೆಲೆ ಎಷ್ಟು?

ಹಂತ–1: ಬಿಡಿ 1 ನ್ನು 6 ರಿಂದ ಗುಣಿಸಿದಾಗ 6 ಸಿಗುತ್ತದೆ. (1 × 6 = 6) 6 ನ್ನು ಬಿಡಿ ಸ್ಥಾನದಲ್ಲಿ ಬರೆಯೋಣ.	31 × 26 6
ಹಂತ–2: 3 ನ್ನು 6 ರಿಂದ ಗುಣಿಸಿದಾಗ 18 ಸಿಗುತ್ತದೆ. (3 × 6 = 18) 18 ನ್ನು ಹತ್ತರ ಸ್ಥಾನದಲ್ಲಿ ಬರೆಯೋಣ.	31 × 26 186
ಹಂತ–3: 1 ನ್ನು 2 ರಿಂದ ಗುಣಿಸಿದಾಗ 2 ಸಿಗುತ್ತದೆ. (2 × 1 = 2) 2 ನ್ನು ಹತ್ತರ ಸ್ಥಾನದಲ್ಲಿ ಬರೆಯೋಣ.	31 × 26 186 2 ⊗
ಹಂತ–4: 3 ನ್ನು 2 ರಿಂದ ಗುಣಿಸಿದಾಗ 6 ಸಿಗುತ್ತದೆ. (3 × 2 = 6) 6 ನ್ನು ನೂರರ ಸ್ಥಾನದಲ್ಲಿ ಬರೆಯೋಣ.	31 × 26 186 62 ⊗
ಹಂತ–5: ಕೂಡಿಸಿ ಮೊತ್ತವನ್ನು ಬರೆಯೋಣ. ಎಲ್ಲಾ ಪುಸ್ತಕಗಳ ಒಟ್ಟು ಬೆಲೆ = ₹ 806	31 × 26 186 62 ⊗ 806

@KTBS NOT TO BE REPUBLISHED

ಲೆಕ್ಕ ಬಿಡಿಸೋಣ.

1) **41 × 26**	2) **35 × 27**	3) **46 × 23**

6.7 ನಿತ್ಯ ಜೀವನದಲ್ಲಿ ಗುಣಾಕಾರ

ಗೆಳೆಯರಿಬ್ಬರು ಪುಸ್ತಕದ ಅಂಗಡಿಗೆ ಹೋದರು. ಅಲ್ಲಿ ಅವರು 5 ನೋಟ್‌ಪುಸ್ತಕ, 4 ಪೆನ್ಸಿಲ್‌ಗಳನ್ನು, 6 ಎರೆಸರ್‌ಗಳು, 3 ಪೆನ್ನುಗಳನ್ನು ಕೊಂಡರು. ಅಂಗಡಿ ದರಪಟ್ಟಿಯನ್ನು ಗಮನಿಸಿ, ಅವರು ಅಂಗಡಿಯವರಿಗೆ ಕೊಡಬೇಕಾದ ಹಣವನ್ನು ಕಂಡುಹಿಡಿಯೋಣ.

*** 1 ನೋಟ್ ಪುಸ್ತಕದ ಬೆಲೆ ₹ 6**

5 ನೋಟ್ ಪುಸ್ತಕಗಳ 5 x 6 = ₹ 30

*** 1 ಪೆನ್ಸಿಲ್ ಬೆಲೆ ₹ 2**

4 ಪೆನ್ಸಿಲ್‌ಗಳ 2 x 4 = ₹ 8

*** 1 ಎರೆಸರ್ ಬೆಲೆ ₹ 3**

6 ಎರೆಸರ್ 3 x 6 = ₹ 18

*** 1 ಪೆನ್ನಿನ ಬೆಲೆ ₹ 5**

3 ಪೆನ್ನಿನ 3 x 5 = ₹ 15

ದರಪಟ್ಟಿ	
ವಸ್ತು	ಬೆಲೆ
ನೋಟ್ ಪುಸ್ತಕ	₹ 6
ಪೆನ್ಸಿಲ್	₹ 2
ಎರೆಸರ್	₹ 3
ಪೆನ್ನು	₹ 5

@KTBS NOT TO BE REPUBLISHED

ಹಾಗಾದರೆ, ಅವರು ಖರ್ಚು ಮಾಡಿದ ಒಟ್ಟು ಹಣ ಬರೆದು ತಿಳಿಯೋಣ.

5 ನೋಟ್‌ಪುಸ್ತಕದ ಬೆಲೆ = ₹ 30

4 ಪೆನ್ಸಿಲ್‌ಗಳ ಬೆಲೆ = ₹ 8

6 ಎರೆಸರ್ ಬೆಲೆ = _____

3 ಪೆನ್ನಿನ ಬೆಲೆ = _____

ಒಟ್ಟು = ☐

6.8 ಸ್ನೇಹಿತರೆಲ್ಲರೂ ಹೋಟೆಲ್‌ನಲ್ಲಿ ತಿಂಡಿ ತಿನ್ನಲು ಹೋದರು. ಅವರು ತಿಂಡಿ ತಿಂದ ನಂತರ 365 ರೂ.ಗಳನ್ನು ಪಾವತಿಸಿದರು. ಅವರು ಪಾವತಿಸಿದ ಹಣ ಲೆಕ್ಕ ಮಾಡಿ ಹೇಳು.

ದರ ಪಟ್ಟಿ

ಕ್ರ. ಸಂ.	ವಿವರ	ದರ ರೂ.ಗಳಲ್ಲಿ
1	ಇಡ್ಲಿ 1 ಕ್ಕೆ	15–00
2	ಉದ್ದಿನವಡೆ 1 ಕ್ಕೆ	20–00
3	ಪೂರಿಸಾಗು 1 ಪ್ಲೇಟ್	40–00
4	1 ಸೆಟ್‌ದೋಸೆ	40–00
5	ಮಸಾಲದೋಸೆ	35–00
6	ರೈಸ್‌ಬಾತ್	30–00

ಹೆಸರು	ತಿಂದ ತಿಂಡಿ	ಕೊಡ ಬೇಕಾದ ಹಣ ರೂ.ಗಳಲ್ಲಿ
ಸಬೀರ	2 ಪ್ಲೇಟ್ ಪೂರಿ ಸಾಗು	
ಶ್ರೀಕಾಂತ	ರೈಸ್‌ಬಾತ್ 1 ಸೆಟ್ ದೋಸೆ	
ಅನಿತ	1 ಪ್ಲೇಟ್ ಪೂರಿ ಮಸಾಲದೋಸೆ	
ಸೋನಿ	4 ಇಡ್ಲಿ 1 ಉದ್ದಿನವಡೆ	
ಜಾನು	1 ಮಸಾಲದೋಸೆ 1 ಉದ್ದಿನವಡೆ	
	ಒಟ್ಟು	

ಹೆಚ್ಚುವರಿ ಚಟ್ನಿಗೆ ರೂ. 5–00

ಪಾರ್ಸೆಲ್‌ಗೆ ಹೆಚ್ಚುವರಿ ಹಣ ನೀಡಬೇಕಾಗುತ್ತದೆ.

@KTBS NOT TO BE REPUBLISHED

6.9 ಸೊನ್ನೆಯೊಂದಿಗೆ ಗುಣಾಕಾರ

'ಸೊನ್ನೆ' ಎಂಬ ದೈತ್ಯನಿಗೆ ಯಾವಾಗಲೂ ಹಸಿವಾಗಿರುತ್ತದೆ. ಅವನು ಯಾರ ಬಳಿ ಹೋಗುತ್ತಾನೆಯೋ ಅವರನ್ನು ತಿಂದುಬಿಡುತ್ತಾನೆ. ಆದರೂ ಅವನ ಹೊಟ್ಟೆ ತುಂಬುವುದಿಲ್ಲ. ಅದು ಹೇಗೆ ಎಂಬುವುದನ್ನು ಈಗ ನೋಡೋಣ.

$15 \times 0 = 0$

$0 \times 15 = 0$

0 ಯಿಂದ ಯಾವುದೇ ಸಂಖ್ಯೆಯನ್ನು ಗುಣಿಸಿದಾಗ ಅಥವಾ ಯಾವುದೇ ಸಂಖ್ಯೆಯಿಂದ ಸೊನ್ನೆಯನ್ನು ಗುಣಿಸಿದಾಗ ಬರುವ ಗುಣಲಬ್ಧ '0' ಆಗಿರುತ್ತದೆ.

@KTBS NOT TO BE REPUBLISHED

ಲೆಕ್ಕ ಬಿಡಿಸೋಣ

ಮಾದರಿ : $264 \times 0 = 0$

1	$350 \times 0 =$	7	$0 \times 675 =$
2	$820 \times 0 =$	8	$543 \times 0 =$
3	$0 \times 280 =$	9	$0 \times 624 =$
4	$420 \times 0 =$	10	$680 \times \_\_ = 0$
5	$0 \times 494 =$	11	$0 \times 879 =$
5	$776 \times 0 =$	12	$0 \times 593 =$

6.10 ಗುಣಾಕಾರ ಕೋಷ್ಟಕ


ಗುಣಾಕಾರ ಕೋಷ್ಟಕವನ್ನು ಪೂರ್ಣಗೊಳಿಸೋಣ. ಹಸಿರು ಬಣ್ಣದ ಚೌಕದಲ್ಲಿನ ಸಂಖ್ಯೆಗಳ ವಿಶೇಷತೆಯನ್ನು ಗಮನಿಸಿ ಚರ್ಚಿಸೋಣ.

×	1	2	3	4	5	6	7	8	9	10	11	12
1	1	2	3	4	5	6						
2	2	4	6	8	10	12						
3	3	6	9	12		18						
4	4	8	12	16	20	24						
5	5	10	15	20	25	30						
6	6	12	18	24	30	36						
7												
8												
9												
10												


NOT TO BE REPUBLISHED ©KTBS

6.11 ಸಂಖ್ಯಾ–ವಿನ್ಯಾಸಗಳು

ಒಂದು ನಿರ್ದಿಷ್ಟವಾದ ರೀತಿಯಲ್ಲಿ ಜೋಡಣೆ ಮಾಡಿರುವ ಸಂಖ್ಯೆಗಳಿಗೆ ವಿನ್ಯಾಸ ಎನ್ನುತ್ತೇವೆ.



ಸಂಖ್ಯೆಗಳನ್ನು ಗಮನಿಸಿ ಸಂಖ್ಯಾ ವಿನ್ಯಾಸವನ್ನು ಪೂರ್ಣಗೊಳಿಸೋಣ.



©KTBS NOT TO BE REPUBLISHED

6.12 ಗುಣಾಕಾರ ಕೋಷ್ಟಕದಲ್ಲಿ ಸಂಖ್ಯಾ ವಿನ್ಯಾಸ

1) 2ರ ಮಗ್ಗಿಯ ಸಂಖ್ಯಾ ವಿನ್ಯಾಸವನ್ನು ಬಾಣದ ಗುರುತಿನೊಂದಿಗೆ ಸೂಚಿಸೋಣ.

4	3	6	5	12	7	14	9	20	11	22
1	13	15	17	19	21	23	25	26	27	28
2	29	8	30	10	31	16	32	18	34	24

2) 8ರ ಮಗ್ಗಿಯ ಸಂಖ್ಯಾ ವಿನ್ಯಾಸವನ್ನು ಬಾಣದ ಗುರುತಿನೊಂದಿಗೆ ಸೂಚಿಸೋಣ.

2	16	3	32	4	48	5	64	53	80	73
66	20	21	31	42	25	51	60	63	65	74
8	30	24	37	40	27	56	68	72	67	88

3) 4ರ ಮಗ್ಗಿಯ ಸಂಖ್ಯಾ ವಿನ್ಯಾಸವನ್ನು ಬಾಣದ ಗುರುತಿನೊಂದಿಗೆ ಸೂಚಿಸೋಣ.


4	1	2	3	12	5	6	7	20	9	10
11	13	8	14	15	13	16	18	19	2`	24
28	22	23	25	36	26	27	29	44	30	31
33	34	32	35	37	38	40	39	41	42	48


ಸೂಚನೆ : ಇದೇ ರೀತಿ ನಿನ್ನ ನೋಟ್ ಪುಸ್ತಕದಲ್ಲಿ ಸಂಖ್ಯಾ ವಿನ್ಯಾಸವನ್ನು ರಚಿಸಿ ಗೆಳೆಯರೊಂದಿಗೆ ಚರ್ಚಿಸು.

NOT TO BE REPUBLISHED @KTBS


6.13 ಲೆಕ್ಕ ಮಾಡೋಣ.

1) ಸೂಕ್ತ ಉತ್ತರದೊಂದಿಗೆ ಖಾಲಿ ಜಾಗವನ್ನು ತುಂಬೋಣ.






2) ಒಂದು ದಿನ ಬೇಟೆಗಾರನು ಬೇಟೆಯಾಡಲು ಕಾಡಿಗೆ ಹೊದನು. ಅವನು ತನ್ನ ಬಿಲ್ಲಿನಿಂದ ಬಾಣ ಬಿಟ್ಟಾಗ ಕೆಲವೊಂದು ಸಂಖ್ಯಾ–ವಿನ್ಯಾಸಗಳು ಹೊರಬಂದವು. ಗಮನಿಸಿ ಮುಂದಿನ ಸಂಖ್ಯೆ ಬರೆಯೋಣ.




©KTBS NOT TO BE REPUBLISHED

3) ಸಂಖ್ಯಾ ವಿನ್ಯಾಸ ಗಮನಿಸಿ, ಪೂರ್ಣಗೊಳಿಸೋಣ.



4) ಕೊಟ್ಟಿರುವ ಚಿತ್ರವನ್ನು ಗಮನಿಸಿ, ಬಕೇಟ್ ಮೇಲಿನ ಲೆಕ್ಕ ಮಾಡಿ ಸೂಕ್ತ ಮೀನಿಗೆ ಗೆರೆ ಎಳೆದು ಹೊಂದಿಸೋಣ.



5) ರೇಖಾಳ ಹತ್ತಿರ ಕೆಲವೊಂದು ಕಡ್ಡಿಗಳಿದ್ದವು. ಅವುಗಳನ್ನು ಈ ಕೆಳಗಿನಂತೆ ಜೋಡಿಸಿ 5ರ ಮಗ್ಗಿ ರಚಿಸಿದ್ದಾಳೆ. ಕಡ್ಡಿಗಳ ಸಹಾಯದಿಂದ ನೀವೂ ಮಗ್ಗಿಯನ್ನು ರಚಿಸಿರಿ.



1 X 5 = 5

2 X 5 = 10


3 X 5 =

4 X 5 =


@KTBS NOT TO BE REPUBLISHED

6) ಸೂಚನೆಗಳನ್ನು ಗಮನಿಸಿ ಲೆಕ್ಕ ಮಾಡೋಣ.


2 ರ ಮಗ್ಗಿ ಮತ್ತು 6 ರ ಮಗ್ಗಿ ಗುಣಲಬ್ಧ ಕೂಡಿದರೆ ಯಾವ ಮಗ್ಗಿಯು ರಚನೆಯಾಗುತ್ತದೆ?




3 ರ ಮಗ್ಗಿ ಮತ್ತು 6 ರ ಮಗ್ಗಿ ಗುಣಲಬ್ಧ ಕೂಡಿದರೆ ಯಾವ ಮಗ್ಗಿಯು ರಚನೆಯಾಗುತ್ತದೆ?



1ರ ಮಗ್ಗಿ ಮತ್ತು 10 ರ ಮಗ್ಗಿ ಗುಣಲಬ್ಧ ಕೂಡಿದರೆ ಯಾವ ಮಗ್ಗಿಯು ರಚನೆಯಾಗುತ್ತದೆ?



5 ರ ಮಗ್ಗಿ ಮತ್ತು 0 ರ ಮಗ್ಗಿ ಗುಣಲಬ್ಧ ಕೂಡಿದರೆ ಯಾವ ಮಗ್ಗಿಯು ರಚನೆಯಾಗುತ್ತದೆ?




©KTBS NOT TO BE REPUBLISHED

7 ಹಂಚಿಕೊಳ್ಳೋಣ

7.1 ಗೆಳೆಯರ ದೋಸ್ತಿ



ಟೋನಿ ಮತ್ತು ಟಾಮಿ ತುಂಬ ಒಳ್ಳೆಯ ಗೆಳೆಯರು. ಒಂದು ದಿನ ಟಾಮಿ ಟೋನಿಯ ಮನೆಗೆ ಆಟವಾಡಲು ಹೋಗುತ್ತಾನೆ. ಆಟದ ನಂತರ ಸುಸ್ತಾಗಿ ಏನಾದರು ತಿನ್ನಲು ಬಯಸುತ್ತಾನೆ.



ಟೋನಿ : ಟಾಮಿ, ಕೇವಲ 6 ಬ್ರೆಡ್‌ಗಳಿವೆ. ಹೇಗೆ ಹಂಚಿಕೊಳ್ಳುವುದು?

ಟಾಮಿ : ಒಂದು ಕೆಲಸ ಮಾಡೋಣ.

ಟೋನಿ : ಹಾ.. ಹೇಳು.


© KTBS NOT TO BE REPUBLISHED

ಟಾಮಿ : ಒಟ್ಟು 6 ಬ್ರೆಡ್‌ಗಳಲ್ಲಿ ಮೊದಲು ನಾನೊಂದು ನೀನೊಂದು ತೆಗೆದುಕೊಳ್ಳೋಣ.

ಈಗ 4 ಉಳಿದವು. ಮತ್ತೆ ನಾನೊಂದು ನೀನೊಂದು ತೆಗೆದುಕೊಳ್ಳೋಣ. 2 ಉಳಿದವು.

ಕೊನೆಗೆ ಉಳಿದಿರುವ 2 ಬ್ರೆಡ್‌ಗಳನ್ನು ನೀನೊಂದು ನಾನೊಂದು ತೆಗೆದುಕೊಳ್ಳೋಣ. ಈಗ ಉಳಿದ ಬ್ರೆಡ್‌ಗಳು _____

		ಉಳಿದ ಬ್ರೆಡ್‌ಗಳು
		
		**4**
		**2**
		**0**





@KTBS NOT TO BE REPUBLISHED


* ನನಗೆ ಅರ್ಥವಾಗಿದೆ ☐
* ನನಗೆ ಸಹಾಯ ಬೇಕಿದೆ ☐

ಶಿಕ್ಷಕರ ಸಹಿ :
ದಿನಾಂಕ :

7.2 ಸಮ ವಿಭಜನೆಯೇ ಭಾಗಾಕಾರ


ಟೋನಿ : ನಮ್ಮ ಹತ್ತಿರ ಇರುವ ವಸ್ತುಗಳನ್ನು ನಾನು ಹೇಳುವ ಸಂಖ್ಯೆಯಷ್ಟೇ ಸಮ ಗುಂಪುಗಳನ್ನು ಮಾಡೋಣ.

8 ಸೇಬುಗಳನ್ನು 2 ರಂತೆ ಸಮ ಗುಂಪು ಮಾಡೋಣ.



ಟಾಮಿ : ಓ! ನನಗೀಗ ತಿಳಿಯಿತು. ಈಗ ನಾಲ್ಕು ಗುಂಪುಗಳು ರಚನೆ ಆದವು. ನಾನೂ ಕೂಡ ಗುಂಪು ಮಾಡಲು ಪ್ರಯತ್ನಿಸುವೆ.

1.




- ❖ ದೊಡ್ಡ ಗಾಜಿನ ಜಾಡಿಯಲ್ಲಿ ಒಟ್ಟು 28 ಮೀನುಗಳಿವೆ.
- ❖ ಮೀನುಗಳನ್ನು ಸಮನಾಗಿ _____ ಜಾಡಿಗಳಲ್ಲಿ ಹಾಕಲಾಗಿದೆ.
- ❖ ಪ್ರತಿಯೊಂದು ಜಾಡಿಯಲ್ಲಿ ಈಗ _____ ಮೀನುಗಳಿವೆ.

©KTBS NOT TO BE REPUBLISHED

7.3 ಸಮಗುಂಪು ಮಾಡೋಣ

6 ಸೇಬುಗಳನ್ನು 3 ಗುಂಪು ಮಾಡೋಣ.



ಪ್ರತಿ ಗುಂಪಿನಲ್ಲಿರುವ ಸೇಬುಗಳು _____

9 ಬ್ಯಾಟ್‌ಗಳನ್ನು 3 ಗುಂಪು ಮಾಡೋಣ.



ಪ್ರತಿ ಗುಂಪಿನಲ್ಲಿರುವ ಬ್ಯಾಟ್‌ಗಳು _____

8 ಪೆನ್ಸಿಲ್‌ಗಳನ್ನು 4 ಗುಂಪು ಮಾಡೋಣ.



ಪ್ರತಿ ಗುಂಪಿನಲ್ಲಿರುವ ಪೆನ್ಸಿಲ್‌ಗಳು _____

10 ಬಲೂನ್‌ಗಳನ್ನು 5 ಗುಂಪು ಮಾಡೋಣ.



ಪ್ರತಿ ಗುಂಪಿನಲ್ಲಿರುವ ಬಲೂನ್‌ಗಳು _____

12 ಬಾಳೆಹಣ್ಣುಗಳನ್ನು 3 ಗುಂಪು ಮಾಡೋಣ.



ಪ್ರತಿ ಗುಂಪಿನಲ್ಲಿರುವ ಬಾಳೆಹಣ್ಣುಗಳು _____


@KTBS NOT TO BE REPUBLISHED

7.4 ಪುನರಾವರ್ತಿತ ವ್ಯವಕಲನ

ಗೌರಿ ಹತ್ತಿರ 20 ಪುಸ್ತಕಗಳಿವೆ. ಕಪಾಟಿನ ಒಂದು ರ್ಯಾಕಿನಲ್ಲಿ 5 ಪುಸ್ತಕಗಳನ್ನು ಮಾತ್ರ ಇಡಲು ಸಾಧ್ಯ. ಎಲ್ಲ ಪುಸ್ತಕಗಳನ್ನು ಜೋಡಿಸಲು ಒಟ್ಟು ಎಷ್ಟು ರ್ಯಾಕುಗಳು ಬೇಕು?


❖ ಮೊದಲನೆಯ ರ್ಯಾಕಿನಲ್ಲಿ 5 ಪುಸ್ತಕಗಳನ್ನು ಜೋಡಿಸಿದರೆ

ಉಳಿಯುವ ಪುಸ್ತಕಗಳು 20 – 5 = ☐




❖ ಎರಡನೆಯ ರ್ಯಾಕಿನಲ್ಲಿ 5 ಪುಸ್ತಕಗಳನ್ನು ಜೋಡಿಸಿದರೆ

ಉಳಿಯುವ ಪುಸ್ತಕಗಳು 15 – 5 = ☐



❖ ಮೂರನೆಯ ರ್ಯಾಕಿನಲ್ಲಿ 5 ಪುಸ್ತಕಗಳನ್ನು ಜೋಡಿಸಿದರೆ

ಉಳಿಯುವ ಪುಸ್ತಕಗಳು 10 – 5 = ☐



❖ ನಾಲ್ಕನೆಯ ರ್ಯಾಕಿನಲ್ಲಿ 5 ಪುಸ್ತಕಗಳನ್ನು ಜೋಡಿಸಿದರೆ

ಉಳಿಯುವ ಪುಸ್ತಕಗಳು 5 – 5 = ☐



ಪ್ರತಿ ರ್ಯಾಕಿಗೆ 5 ಪುಸ್ತಕಗಳಂತೆ 20 ಪುಸ್ತಕಗಳು _____ ರ್ಯಾಕುಗಳಲ್ಲಿ ತುಂಬಿದವು.

ಪುನರಾವರ್ತಿತ ವ್ಯವಕಲನವನ್ನು ಭಾಗಾಕಾರ ಎನ್ನುತ್ತಾರೆ.

©KTBS NOT TO BE REPUBLISHED


7.5 ದೈನಂದಿನ ಜೀವನದಲ್ಲಿ ಭಾಗಾಕಾರ

ಸುಮಾಳಿಗೆ ಚಿಕಿತ್ಸೆ ನಂತರ ಡಾಕ್ಟರ್ 15 ಮಾತ್ರೆಗಳನ್ನು ನೀಡಿ, ದಿನಕ್ಕೆ 3 ರಂತೆ ಬೆಳಗ್ಗೆ, ಮಧ್ಯಾಹ್ನ ಹಾಗೂ ರಾತ್ರಿಗೆ ತೆಗೆದುಕೊಳ್ಳಲು ಹೇಳುತ್ತಾರೆ. ಹಾಗಾದರೆ ಅವಳು ಎಷ್ಟು ದಿನ ಮಾತ್ರೆ ತೆಗೆದುಕೊಳ್ಳಬೇಕು ಎಂಬುದನ್ನು ತಿಳಿಯೋಣ.

- ಒಟ್ಟು ಮಾತ್ರೆಗಳು – 15
- ಪ್ರತಿ ದಿನ ತೆಗೆದುಕೊಳ್ಳಬೇಕಾದ ಮಾತ್ರೆಗಳು – 3
- ಸುಮಾ ಮಾತ್ರೆ ತೆಗೆದುಕೊಳ್ಳಬೇಕಾದ ಒಟ್ಟು ದಿನಗಳು = ?

ಮಾಡುವ ವಿಧಾನ:

1 ನೇ ದಿನ	15
	-3
2 ನೇ ದಿನ	12
	-3
3 ನೇ ದಿನ	9
	-3
4 ನೇ ದಿನ	6
	-3
5 ನೇ ದಿನ	3
	3



@KTBS NOT TO BE REPUBLISHED

ಸುಮಾ ಮಾತ್ರೆ ತೆಗೆದುಕೊಳ್ಳಬೇಕಾದ ಒಟ್ಟು ದಿನಗಳು :

7.6 ಮಗ್ಗಿ ಬಳಸಿ ಭಾಗಾಕಾರ





ಟಾಮಿ : ವಸ್ತುಗಳನ್ನು ಸಮನಾಗಿ ಹಂಚಿಕೊಳ್ಳಲು ಸುಲಭ ವಿಧಾನ ತಿಳಿಯಬೇಕಿದೆ. ನೀನು ನನಗೆ ತಿಳಿಸುವೆಯಾ?

ಟೋನಿ : ಖಂಡಿತ ತಿಳಿಸುತ್ತೇನೆ. ನನಗೆ ಅತಿ ಸುಲಭದ ವಿಧಾನ ಗೊತ್ತು. 12 ಸ್ಟ್ರಾಬೇರಿ ಹಣ್ಣುಗಳಿವೆ. ನಾಲ್ಕು ಜನರಿಗೆ ಸಮನಾಗಿ ಹಂಚಬೇಕು. ಈ ವಿಧಾನದಲ್ಲಿ ಲೆಕ್ಕ ಮಾಡಲು $12 \div 4$ ಹೀಗೆ ಬರೆದುಕೊಳ್ಳಬೇಕು. ಈ ಕ್ರಿಯೆಯಲ್ಲಿ ÷ ಚಿಹ್ನೆ ಬಳಸುತ್ತೇವೆ. ಇದೇ ಭಾಗಾಕಾರದ ಚಿಹ್ನೆ. "ಸಮನಾಗಿ ಹಂಚುವುದು ಅಥವಾ ಗುಂಪು ಮಾಡುವ ವಿಧಾನವನ್ನು ಭಾಗಾಕಾರ ಎನ್ನುತ್ತಾರೆ".

@KTBS NOT TO BE REPUBLISHED

ಮಗ್ಗಿ ಬಳಸಿ ಭಾಗಿಸೋಣ

1) 12 ÷ 4

4 ಮೂರುಗಳು 12 ಕ್ಕೆ ಸಮ

$4 \times 3 = 12$

$12 \div 4 = 3$

ಭಾಜ್ಯ			
ಭಾಜಕ 4)	1	2	(3 ಭಾಗಲಬ್ಧ
	1	2	
	0	0	ಶೇಷ

2) 40 ÷ 5

5 ಎಂಟುಗಳು 40 ಕ್ಕೆ ಸಮ

$5 \times 8 = 40$

$40 \div 5 = 8$

ಭಾಜ್ಯ			
ಭಾಜಕ 5)	4	0	(8 ಭಾಗಲಬ್ಧ
	4	0	
	0	0	ಶೇಷ

3) 40 ÷ 5 = 8

40 ÷ 5 = 8

⇓ ⇓ ⇓

ಭಾಜ್ಯ ÷ ಭಾಜಕ = ಭಾಗಲಬ್ಧ

ಭಾಜಕ) ಭಾಜ್ಯ (ಭಾಗಲಬ್ಧ

7.7 ಮಗ್ಗಿ ಬಳಸಿ ಭಾಗಾಕಾರ ಲೆಕ್ಕಗಳನ್ನು ಮಾಡೋಣ.

1. ಅನಿತಾ 15 ಮೀಟರ್ ರಿಬ್ಬನ್ ಅನ್ನು 3 ಜನರಿಗೆ ಸಮನಾಗಿ ಕತ್ತರಿಸಿ ಕೊಡುತ್ತಾಳೆ. ಹಾಗಾದರೆ ಪ್ರತಿಯೊಬ್ಬರಿಗೂ ದೊರೆತ ರಿಬ್ಬನ್ ಅಳತೆ ಎಷ್ಟು?

$15 \div 3 =$

ಪ್ರತಿಯೊಬ್ಬರಿಗೂ ದೊರೆತ ರಿಬ್ಬನ್ ಅಳತೆ = _____

2. 18 ಚಾಕಲೇಟ್‌ಗಳನ್ನು ಒಬ್ಬರಿಗೆ 2 ರಂತೆ ಹಂಚಿದರೆ ಎಷ್ಟು ಜನರಿಗೆ ಹಂಚಬಹುದು?

@KTBS NOT TO BE REPUBLISHED

_____ ಜನರಿಗೆ ಹಂಚಬಹುದು.

3. ಪಿಂಕಿ ತನ್ನ ಬಳಿ ಇರುವ 25 ಬಾಳೆ ಹಣ್ಣುಗಳನ್ನು, 5 ಕೋತಿಗಳಿಗೆ ಸಮನಾಗಿ ಹಂಚಿದ್ದಾಳೆ. ಹಾಗಾದರೆ ಪ್ರತಿಯೊಂದು ಕೋತಿಗೂ ಹಂಚಿದ ಬಾಳೆಹಣ್ಣುಗಳು ಎಷ್ಟು?

ಪ್ರತಿ ಕೋತಿಗೂ ಸಿಗುವ ಬಾಳೆಹಣ್ಣುಗಳು = _____

7.8 ಆಟ ಆಡೋಣ

ಭಾಗಿಸುವ ಸಂಖ್ಯೆಗಳು:

24, 46, 8, 19, 43, 62, 80, 99

ಆಟದ ನಿಯಮಗಳು



- ಇಬ್ಬರು ಅಥವಾ 4 ಜನ ಈ ಆಟವನ್ನು ಆಡೋಣ.
- 1, 2, 3, 4, 5, 6 ಮೇಲ್ಮುಖವಾಗಿರುವ ಡೈಸ್ ಬಳಸೋಣ.
- ಡೈಸ್‌ನ್ನು ಒಬ್ಬರಾದ ನಂತರ ಒಬ್ಬರು ಉರುಳಿಸೋಣ.
- ಮೇಲ್ಮುಖವಾಗಿ ಬಿದ್ದ ಸಂಖ್ಯೆಯಿಂದ ಮೇಲೆ ಕೊಟ್ಟ ಸಂಖ್ಯೆಗಳನ್ನು ಖಾಲಿ ಜಾಗ / ನೋಟ್ ಪುಸ್ತಕದಲ್ಲಿ ಬರೆದುಕೊಂಡು ಭಾಗಿಸೋಣ.
- ಯಾರು ಅತೀ ಹೆಚ್ಚು ಲೆಕ್ಕ ಸರಿ ಮಾಡುವರೋ ಅವರು ಈ ಆಟದಲ್ಲಿ ಗೆದ್ದಂತೆ.


@KTBS
NOT TO BE REPUBLISHED


* ನನಗೆ ಅರ್ಥವಾಗಿದೆ ☐
* ನನಗೆ ಸಹಾಯ ಬೇಕಿದೆ ☐

ಶಿಕ್ಷಕರ ಸಹಿ :
ದಿನಾಂಕ :

7.9 ಲೆಕ್ಕ ಮಾಡೋಣ.

1. 12 ಬಾಳೆ ಹಣ್ಣುಗಳನ್ನು 3 ರಂತೆ ಗುಂಪು ಮಾಡಿರಿ.





ಗುಂಪುಗಳ ಸಂಖ್ಯೆ = ☐

2. 18 ಮಣಿಗಳನ್ನು 3 ದಾರಗಳಲ್ಲಿ ಸಮನಾಗಿ ಚಿತ್ರಿಸಿರಿ.



3. 32 ಕ್ಯಾಂಡಲ್‌ಗಳನ್ನು 8 ಜನರಿಗೆ ಸಮನಾಗಿ ಹಂಚಿದಾಗ, ಪ್ರತಿಯೊಬ್ಬರಿಗೆ ಸಿಗುವ ಕ್ಯಾಂಡಲ್‌ಗಳನ್ನು ಗೆರೆ ಎಳೆದು ಗುಂಪು ಮಾಡಿರಿ.



© KTBS NOT TO BE REPUBLISHED

4. ಲೆಕ್ಕಗಳನ್ನು ಮಾಡಿರಿ.

(1) 48 ÷ 6 =

(4) 36 ÷ 6 =

(7) 49 ÷ 7 =

(2) 55 ÷ 5 =

(5) 70 ÷ 7 =

(8) 28 ÷ 2 =

(3) 25 ÷ 5 =


(6) 48 ÷ 4 =

(9) 39 ÷ 3 =

5.

ನೀನೇ ಮಾಡು

ಗಡಿಯಾರ ಚಿತ್ರ ನೋಡಿ
3 ಸಮಾನ ಭಾಗ
ಮಾಡಿರಿ.




@KTBS NOT TO BE REPUBLISHED


6. ಗುಣಾಕಾರ ಮತ್ತು ಭಾಗಾಕಾರ ಸಹಸಂಬಂಧ ಬರೆಯಿರಿ.


1. $5 \times 9 = 45$


2. $6 \times 4 = 24$


7. ಸರಿಯಾದ ಉತ್ತರಕ್ಕೆ ಗೆರೆ ಎಳೆಯಿರಿ.











5

6


7

8

10


@KTBS NOT TO BE REPUBLISHED

8. 20 ನಕ್ಷತ್ರಗಳನ್ನು ಸಮನಾಗಿ ಖಾಲಿ ಮೋಡಗಳ ಮೇಲೆ ಚಿತ್ರಿಸಿ.






9. ಕೇಕ್ ತಿನ್ನಲು ಮೊಲಕ್ಕೆ ಸಹಾಯ ಮಾಡಿರಿ.



@KTBS NOT TO BE REPUBLISHED

10. ಸಂಖ್ಯಾ ವಿನ್ಯಾಸವನ್ನು ಗಮನಿಸಿ ಸೂಕ್ತ ಉತ್ತರವನ್ನು ಖಾಲಿ ಜಾಗದಲ್ಲಿ ಬರೆ.



@KTBS NOT TO BE REPUBLISHED


* ನನಗೆ ಅರ್ಥವಾಗಿದೆ	
* ನನಗೆ ಸಹಾಯ ಬೇಕಿದೆ	

ಶಿಕ್ಷಕರ ಸಹಿ :
ದಿನಾಂಕ :

8 ಪೂರ್ಣ ಮತ್ತು ಸಮಭಾಗಗಳು

8.1 ಭಾಗ ಮಾಡೋಣ

 ಚೋಟು ಮತ್ತು ಮೋಟು  ಇಬ್ಬರೂ ಸ್ನೇಹಿತರು. ಒಂದು ದಿನ ಅವರಿಬ್ಬರಿಗೆ ಹಸಿವಾಗಿತ್ತು. ಅಡುಗೆ ಮನೆಗೆ ಹೋಗಿ ಒಂದು ಚಪಾತಿ ತಂದರು. ಒಂದೇ ಚಪಾತಿಯನ್ನು ಹೇಗೆ ಹಂಚಿಕೊಳ್ಳುವುದು ಎಂದು ಯೋಚಿಸತೊಡಗಿದರು. ಆಗ ಅಲ್ಲಿಗೆ ಚಿಕ್ಕಿ ಬಂದಳು.



 ನಮ್ಮಿಬ್ಬರಿಗೂ ಚಪಾತಿಯನ್ನು ಹೇಗೆ ಸಮಭಾಗ ಮಾಡುವುದು ತಿಳಿಯುತ್ತಿಲ್ಲ. ನಮಗೆ ಸಹಾಯ ಮಾಡುವೆಯಾ?

 ಸರಿ, ಚಿಂತಿಸಬೇಡಿ. ನಾನು ಸಮ ಭಾಗ ಮಾಡಿಕೊಡುತ್ತೇನೆ.

ಜಾಣ ಚಿಕ್ಕಿ ಚಪಾತಿಯನ್ನು ಹೀಗೆ ಭಾಗ ಮಾಡಿದಳು.



ಎರಡೂ ಭಾಗಗಳು ಸಮನಾಗಿವೆಯೇ? ಹೌದು / ಇಲ್ಲ

 ಎಡಗೈಯಲ್ಲಿನ ಚಪಾತಿಯ ಭಾಗ ದೊಡ್ಡದು, ಬಲಗೈಯಲ್ಲಿನ ಭಾಗ ಚಿಕ್ಕದು ಎಂದವು.


© KTBS NOT TO BE REPUBLISHED

ದೊಡ್ಡ ಭಾಗವನ್ನು ಚಿಕ್ಕ ಭಾಗದಷ್ಟೇ ಸಮ ಮಾಡಲು, ಚಪಾತಿಯ ದೊಡ್ಡ ತುಂಡಿನ ಸ್ವಲ್ಪ ಭಾಗ ಮುರಿದು ತಿಂದಿತು.




ಈಗ ಎರಡೂ ಭಾಗಗಳು ಸಮನಾಗಿವೆಯೇ? **ಹೌದು / ಇಲ್ಲ**

ಎರಡೂ ಬೆಕ್ಕುಗಳು, ಈ ಸಲ ಬಲಗೈಯಲ್ಲಿರುವ ಭಾಗ ದೊಡ್ಡದು, ಎಡಗೈಯಲ್ಲಿರುವ ಭಾಗ ಚಿಕ್ಕದು ಎಂದು ಅಳಲಾರಂಭಿಸಿದವು. ಚಿಕ್ಕಿ ದೊಡ್ಡ ಭಾಗವನ್ನು ಚಿಕ್ಕ ಭಾಗದಷ್ಟೇ ಸಮ ಮಾಡಲು, ಮತ್ತೆ ಚಪಾತಿಯ ದೊಡ್ಡ ತುಂಡಿನ ಸ್ವಲ್ಪ ಭಾಗ ಮುರಿದು ತಿಂದಿತು. ಈಗ ಚಪಾತಿಯ ಚಿಕ್ಕ ಭಾಗಗಳು ಮಾತ್ರ ಉಳಿದವು.




ಚಿಕ್ಕಿ–ಇದು ನಾನು ಕೆಲಸ ಮಾಡಿದ್ದಕ್ಕೆ ನನ್ನ ಪಾಲಿನ ಭಾಗ ಎಂದು ಗಬಕ್ಕನೆ ತಿಂದು ಚಂಗನೆ ಜಿಗಿದು ಮರವೇರಿತು.



ಯೋಚಿಸಿರಿ:

* ಚಪಾತಿಯನ್ನು ಸಮಭಾಗ ಮಾಡಲು ನಿನಗೆ ನೀಡಿದರೆ, ಹೇಗೆ ಭಾಗ ಮಾಡುತ್ತಿದ್ದೆ?

ಚಿಕ್ಕಿಯ ಹಾಗೆ ಮಾಡದೇ ಸಮನಾಗಿ ಮಡಚಿ ಭಾಗ ಮಾಡಿದಾಗ ಪ್ರತಿ ಬೆಕ್ಕಿಗೆ ಅರ್ಧ ಭಾಗ ಸಿಗುತ್ತಿತ್ತು.



© KSEEB
NOT TO BE REPUBLISHED

8.2 ಹಲವು ತುಂಡುಗಳ ಅರ್ಧ




ಕಮಲಿ ಒಂದು ಚಾಕಲೇಟನ್ನು ಸಮಭಾಗ ಮಾಡಿದಳು. ಅರ್ಧ ಚಾಕಲೇಟನ್ನು ಗೆಳತಿ ವಿಮಲಾಳಿಗೆ ಕೊಟ್ಟಳು.

ವಿಮಲಾಳಿಗೆ ಸಿಕ್ಕ ಭಾಗವನ್ನು ವೃತ್ತ ಹಾಕಿ ಗುರುತಿಸೋಣ.

ಚಾಕಲೇಟಿನಲ್ಲಿ ಎಷ್ಟು ತುಂಡುಗಳಿವೆ? _____

ಕಮಲಿ ಬಳಿ ಉಳಿದ ಚಾಕಲೇಟ್ ತುಂಡುಗಳೆಷ್ಟು? _____


1. ಎರಡು ಸಮಭಾಗ ಮಾಡೋಣ



© KTBS NOT TO BE REPUBLISHED



ನಾನು ಹೀಗೆ ಎರಡು ಭಾಗ ಮಾಡಿದೆ. ಪ್ರತಿ ಭಾಗವೂ 'ಅರ್ಧಭಾಗ'



ಭಿನ್ನರಾಶಿ ರೂಪದಲ್ಲಿ ಹೀಗೆ ಬರೆಯುತ್ತೇನೆ $\frac{1}{2}$

ಅಂದರೆ ಎರಡು ಸಮಭಾಗಗಳಲ್ಲಿ ಒಂದು ಭಾಗ.


ಇದನ್ನು 'ಎರಡನೆಯ ಒಂದು' ಎಂದು ಓದುತ್ತೇವೆ.

* ನನಗೆ ಅರ್ಥವಾಗಿದೆ ☐
* ನನಗೆ ಸಹಾಯ ಬೇಕಿದೆ ☐

ಶಿಕ್ಷಕರ ಸಹಿ :
ದಿನಾಂಕ :

ಮಾಡಿ ನೋಡೋಣ:


1. ಆಯತಾಕಾರದ ಹಾಳೆಯನ್ನು ಎಷ್ಟು ವಿಧಾನಗಳಲ್ಲಿ ಸಮನಾಗಿ ಮಡಚಬಹುದು? ನಾಲ್ಕು ವಿಧಾನಗಳನ್ನು ಗೆರೆ ಎಳೆದು ಸಮಭಾಗ ಮಾಡಿ ತೋರಿಸೋಣ.




ಅ) ಗೆರೆ ಎಳೆದ ಎಲ್ಲಾ ಭಾಗಗಳು ಸಮನಾಗಿವೆಯೇ? ಹೌದು / ಇಲ್ಲ.

ಬ) ಆಯತಾಕಾರದ ಹಾಳೆಗಳಿಗೆ ಸಮಾನ ಭಾಗ ಹೇಗೆ ಮಾಡಿದೆ ಎಂದು ಹೇಳೋಣ.

2. ಆಕೃತಿಗಳಿಗೆ ಸಮನಾಗಿ ಗೆರೆ ಎಳೆದು, ಸಮಭಾಗ ಮಾಡಿ ಅರ್ಧಭಾಗಕ್ಕೆ ಬಣ್ಣ ಹಾಕೋಣ.




3. ಚಿತ್ರಗಳಲ್ಲಿ ಗೆರೆ ಎಳೆಯುವ ಮೂಲಕ ಅರ್ಧ ಭಾಗ ಗುರುತಿಸಿ, ಬಣ್ಣ ಹಾಕೋಣ.



@KTBS NOT TO BE REPUBLISHED


8.3 ಒಂದು ಆಯತಾಕಾರದ ಹಾಳೆಯನ್ನು ನಾಲ್ಕು ಸಮ ಭಾಗ ಮಾಡೋಣ.

ಆಯತಾಕಾರದ ಪೂರ್ಣಕಾಗದವನ್ನು ಸಮನಾಗಿ ಮಡಚೋಣ.




ಉಂಟಾದ ಸಮಭಾಗಗಳು _____

ಚಿತ್ರದಲ್ಲಿ ತೋರಿಸಿದಂತೆ ಮತ್ತೊಮ್ಮೆ ಮಡಚೋಣ



ಈಗ _____ ಸಮಭಾಗಗಳು ಉಂಟಾದವು.


ಭಾಗಗಳಲ್ಲಿ ಒಂದು ಭಾಗಕ್ಕೆ ಬಣ್ಣ ತುಂಬೋಣ



ಒಟ್ಟು ಸಮಭಾಗಗಳು ___
ಬಣ್ಣ ಹಾಕಿದ ಭಾಗ ___

ಬಣ್ಣ ಹಾಕಿದ ಭಾಗ ಪೂರ್ಣಕಾಗದದ ಕಾಲು ಭಾಗವಾಗಿದೆ.

ಭಾಗಗಳಲ್ಲಿ ಮೂರು ಭಾಗಕ್ಕೆ ಬಣ್ಣ ತುಂಬೋಣ



ಒಟ್ಟು ಭಾಗಗಳು ___
ಬಣ್ಣ ಹಾಕಿದ ಭಾಗಗಳು ___
ಬಣ್ಣ ಹಾಕದೇ ಉಳಿದ ಭಾಗ ___

ಬಣ್ಣ ಹಾಕಿದ ಭಾಗ ಪೂರ್ಣಕಾಗದದ ಮುಕ್ಕಾಲು ಭಾಗವಾಗಿದೆ.

ಇದನ್ನು ಹೀಗೆ ಬರೆಯುತ್ತೇವೆ. $\frac{3}{4}$

ಇದನ್ನು ನಾವು ನಾಲ್ಕನೆಯ ಮೂರು ಎಂದು ಓದುತ್ತೇವೆ.


@KTBS NOT TO BE REPUBLISHED

* ನನಗೆ ಅರ್ಥವಾಗಿದೆ ☐
* ನನಗೆ ಸಹಾಯ ಬೇಕಿದೆ ☐

ಶಿಕ್ಷಕರ ಸಹಿ :
ದಿನಾಂಕ :









ನಾನು ಹೀಗೆ ನಾಲ್ಕು ಭಾಗ ಮಾಡಿದೆ.



ಭಿನ್ನರಾಶಿ ರೂಪದಲ್ಲಿ ಹೀಗೆ ಬರೆಯುತ್ತೇನೆ $\frac{1}{4}$


ಇದನ್ನು ಭಿನ್ನರಾಶಿಯಲ್ಲಿ ನಾಲ್ಕನೇ ಒಂದು ಎನ್ನುತ್ತಾರೆ. ಅಂದರೆ, ನಾಲ್ಕು ಸಮಭಾಗಗಳಲ್ಲಿ ಒಂದು ಭಾಗ ಎಂದರ್ಥ.

1. ಎಡಭಾಗದಲ್ಲಿ ನೀಡಿದ ಭಿನ್ನರಾಶಿ ಸೂಚಿಸುವ ಭಾಗಗಳಿಗೆ ಬಣ್ಣ ಹಚ್ಚಿರುವುದನ್ನು ಗಮನಿಸಿ, ಆಯತದ ಭಾಗಗಳಿಗೆ ಬಣ್ಣ ತುಂಬೋಣ.


ಪೂರ್ಣಭಾಗ 1			
ಅರ್ಧಭಾಗ $\frac{1}{2}$			
ಕಾಲುಭಾಗ $\frac{1}{4}$			
ಮುಕ್ಕಾಲು ಭಾಗ $\frac{3}{4}$			


@KTBS NOT TO BE REPUBLISHED


2. ಕೆಳಗಿನ ಆಕೃತಿಗಳಲ್ಲಿ ಗೆರೆ ಎಳೆದು ನಾಲ್ಕು ಸಮಭಾಗ ಮಾಡಿ ಕಾಲು ಭಾಗಕ್ಕೆ ಕೆಂಪು ಬಣ್ಣ ಮತ್ತು ಮುಕ್ಕಾಲು ಭಾಗಕ್ಕೆ ಹಸಿರು ಬಣ್ಣ ತುಂಬೋಣ.




3. ಉಳಿದ ಅರ್ಧ ಚಿತ್ರವನ್ನು ಬರೆದು, ಅವುಗಳಿಗೆ ಬಣ್ಣ ಹಚ್ಚೋಣ.










@KTBS NOT TO BE REPUBLISHED


8.4 ವಸ್ತುಗಳ ಗುಂಪನ್ನು ಭಾಗ ಮಾಡುವುದು.

ಹಣ್ಣುಗಳನ್ನು ಎಣಿಸಿ ಬರೆಯೋಣ. ಅವುಗಳ ಸಂಖ್ಯೆಗೆ ಅನುಗುಣವಾಗಿ ಅರ್ಧ, ಕಾಲು ಮತ್ತು ಮುಕ್ಕಾಲು ಭಾಗ ಮಾಡೋಣ.




ಒಟ್ಟು ಸೇಬುಹಣ್ಣುಗಳ ಸಂಖ್ಯೆ = **8**


ಸೇಬುಗಳ ಗುಂಪನ್ನು ಗೆರೆ ಎಳೆದು ಅರ್ಧ ಭಾಗ ಮಾಡೋಣ. ಗೆರೆ ಎಳೆಯದೇ ಉಳಿದ ಭಾಗ _____



ಸೇಬುಗಳ ಗುಂಪನ್ನು ಗೆರೆ ಎಳೆದು ಕಾಲು ಭಾಗ ಮಾಡೋಣ. ಗೆರೆ ಎಳೆಯದೇ ಉಳಿದ ಭಾಗ _____




ಸೇಬುಗಳ ಗುಂಪನ್ನು ಗೆರೆ ಎಳೆದು ಮುಕ್ಕಾಲು ಭಾಗ ಮಾಡೋಣ. ಗೆರೆ ಎಳೆಯದೇ ಉಳಿದ ಭಾಗ _____



© KTBS NOT TO BE REPUBLISHED

1. ಚೆಂಡುಗಳ ಗುಂಪಿನಲ್ಲಿ ಕಾಲು ಭಾಗ ಮತ್ತು ಮುಕ್ಕಾಲು ಭಾಗವನ್ನು ಗೆರೆ ಎಳೆದು ತೋರಿಸೋಣ.



2. ಆಟಿಕೆಗಳನ್ನು ಎಣಿಸಿ ಮುಕ್ಕಾಲು ಭಾಗದಷ್ಟು ಆಟಿಕೆಗಳ ಸುತ್ತ ಗೆರೆ ಎಳೆಯೋಣ.




3. ಕೆಳಗಿನ ಚಿತ್ರಗಳಲ್ಲಿ ಸೂಚಿಸಿದಷ್ಟು ಭಾಗಕ್ಕೆ ಬಣ್ಣ ಹಾಕೋಣ.


ಚಿತ್ರ	ಅರ್ಧ ಭಾಗ $\left(\frac{1}{2}\right)$	ಕಾಲು ಭಾಗ $\left(\frac{1}{4}\right)$	ಮುಕ್ಕಾಲು ಭಾಗ $\left(\frac{3}{4}\right)$
ಮಾದರಿ :			
△ △ △ △ △ △ △ △	△ △ △ △ △ △ △ △	△ △ △ △ △ △ △ △	△ △ △ △ △ △ △ △
○○○○	○○○○	○○○○	○○○○
☆☆☆ ☆☆☆ ☆☆☆ ☆☆☆	☆☆☆ ☆☆☆ ☆☆☆ ☆☆☆	☆☆☆ ☆☆☆ ☆☆☆ ☆☆☆	☆☆☆ ☆☆☆ ☆☆☆ ☆☆☆

© KTBS NOT TO BE REPUBLISHED


4. ಕೆಳಗಿನ ಆಕೃತಿಗಳಲ್ಲಿ ಬಣ್ಣ ತುಂಬಿದ ಭಾಗ ಹಾಗೂ ಬಿಳಿ ಭಾಗ ಗಮನಿಸಿ, ಅರ್ಧ, ಕಾಲು, ಮುಕ್ಕಾಲು ಎಂಬುದನ್ನು ಅಕ್ಷರದಲ್ಲಿ ಬರೆಯೋಣ.

ಆಕೃತಿ						
ಬಿಳಿ ಭಾಗ	ಅರ್ಧ					
ಬಣ್ಣ ತುಂಬಿದ ಭಾಗ						

5. ಸಮಭಾಗ ಇಲ್ಲದ ಆಕೃತಿಗಳನ್ನು ಗುರುತಿಸಿ ವೃತ್ತ ಹಾಕೋಣ.




6. ಕೆಳಗೆ ಸೂಚಿಸಿದ ಭಾಗದಷ್ಟು ಬಣ್ಣ ತುಂಬೋಣ.






©KTBS NOT TO BE REPUBLISHED

7. ವೃತ್ತವನ್ನು ನಾಲ್ಕು ಸಮಭಾಗ ಮಾಡಿ ಕಾಲು ಭಾಗಕ್ಕೆ ಕೆಂಪು ಬಣ್ಣವನ್ನು, ಅರ್ಧ ಭಾಗಕ್ಕೆ ಹಳದಿ ಬಣ್ಣವನ್ನು ತುಂಬೋಣ.



8. ಚಿತ್ರ ಗಮನಿಸಿ ಉತ್ತರಿಸೋಣ.

	= ಎರಡರಲ್ಲಿ ಒಂದು ಭಾಗ = $\frac{1}{2}$ = ಅರ್ಧ
	= ನಾಲ್ಕರಲ್ಲಿ _____ ಭಾಗ = $\frac{1}{4}$ = ಕಾಲು
	= _____ ರಲ್ಲಿ 3 ಭಾಗ = $\frac{3}{4}$ = _____
	= _____ ರಲ್ಲಿ _____ ಭಾಗ = $\frac{\square}{\square}$

@KTBS NOT TO BE REPUBLISHED

	= _____ ರಲ್ಲಿ 4 ಭಾಗ = $\frac{4}{4}$ = ಪೂರ್ಣ
	= _____
	= _____

9. ಬಣ್ಣ ಬಣ್ಣದ ಹಾಳೆಗಳನ್ನು $\frac{1}{2}, \frac{1}{4}, \frac{3}{4}$ ಭಾಗಗಳಾಗಿ ಕತ್ತರಿಸಿ, ವಿವಿಧ ಆಕೃತಿಗಳನ್ನು ರಚಿಸೋಣ.



@KTBS NOT TO BE REPUBLISHED

9 ಅಳೆಯೋಣ – ಕಲಿಯೋಣ

9.1 ಚಿನ್ನಿ–ದಾಂಡು ಆಟ

ರಾಣಿ ಮತ್ತು ಪಿಂಟು ತಮ್ಮ ಸ್ನೇಹಿತರ ಜೊತೆ ಸೇರಿ ಚಿನ್ನಿ–ದಾಂಡು ಆಟ ಆಡುತ್ತಿದ್ದಾರೆ. ರಾಣಿ ಹೊಡೆದ ಚಿನ್ನಿ ಸ್ವಲ್ಪ ದೂರ ಹೋಗಿ ಬಿದ್ದಿತು. ಮಕ್ಕಳು ಆ ದೂರವನ್ನು ಗೇಣಿನಿಂದ ಅಳೆಯಲು ಪ್ರಯತ್ನಿಸಿದರು.



ರಾಣಿ : ನನ್ನ ಗೇಣಿನಿಂದ ಅಳೆದಾಗ 10 ಗೇಣಿದೆ.

ಪಿಂಟು : ನಾನು ದೂರವನ್ನು ಅಳೆದಾಗ 9 ಗೇಣುಗಳು ಮಾತ್ರ ಇದೆ.






NOT TO BE REPUBLISHED © KTBS


ರಾಣಿ : ರಾಮು ಅಣ್ಣ, ನಾವಿಬ್ಬರೂ ಅಳೆದಾಗ ದೂರ ಏಕೆ ವ್ಯತ್ಯಾಸವಾಗುತ್ತಿದೆ.

ರಾಮು : ಬನ್ನಿ, ನಿಮ್ಮ ಕೈಗಳನ್ನು ಜೋಡಿಸಿ ನೋಡೋಣ.

ರಾಣಿ : ಹೌದಲ್ಲಾ! ನಮ್ಮ ಕೈಗಳು ಬೇರೆ ಬೇರೆ ಅಳತೆಯಲ್ಲಿವೆ.



ರಾಮು : ಒಂದೇ ಅಥವಾ ನಿಖರ ಅಳತೆ ಬರಬೇಕಾದರೆ ನಾವು ಅಳತೆಪಟ್ಟಿ ಬಳಸಬೇಕು.




© KTBS NOT TO BE REPUBLISHED

ರಾಣಿ : ಓ! ಇದರಲ್ಲಿ ಮೊದಲ ಸಂಖ್ಯೆ ___ ಮತ್ತು ಕೊನೆಯ ಸಂಖ್ಯೆ ___ ಇದೆ.

ರಾಮು : ಹೌದು, ಇದು 15 **'ಸೆಂಟಿ ಮೀಟರ್'** ಅಳತೆಯ ಪಟ್ಟಿ.

ಅಳತೆಪಟ್ಟಿಯಲ್ಲಿನ ಎರಡು ಅನುಕ್ರಮ ಸಂಖ್ಯೆಗಳ ನಡುವಿನ ನಿರ್ದಿಷ್ಟ ಅಳತೆಯನ್ನು ಸೆಂಟಿ ಮೀಟರ್ ಎನ್ನುತ್ತೇವೆ. ಇದನ್ನು ಸೆಂ.ಮೀ. (cm) ಎಂದು ಬರೆಯುತ್ತೇವೆ. 1 ಸೆಂ.ಮೀ ನಲ್ಲಿ 10 ಮಿಲಿ ಮೀಟರ್ ಇದೆ.



ರಾಣಿ : ಇದನ್ನು ಬಳಸಿ ಚಿನ್ನಿ ಎಷ್ಟು ದೂರದಲ್ಲಿದೆ ಎಂದು ಅಳೆಯೋಣ.

ಪಿಂಟು : ಅಳತೆ ಪಟ್ಟಿಯಿಂದ ಅಳೆದಾಗ 95 ಸೆಂ.ಮೀ. ಅಳತೆ ಬಂದಿತು.

ರಾಣಿ : ರಾಮು ಅಣ್ಣ, ಟೈಲರ್ ಅಣ್ಣನ ಅಂಗಡಿಯಲ್ಲಿ ಇದಕ್ಕಿಂತ ಉದ್ದದ

ಅಳತೆಪಟ್ಟಿ ಇದೆ. ಹೌದಲ್ಲವೇ? ಅಲ್ಲಿ ಹೋಗಿ ತಿಳಿದುಕೊಳ್ಳೋಣ.

ರಾಮು : ಟೈಲರ್ ಅಣ್ಣ, ನಮಗೆ ನೀವು ಬಳಸುವ ಅಳತೆಪಟ್ಟಿ ತೋರಿಸುವಿರಾ?





ಟೈಲರ್ : ನಾವು ಬಳಸುವ ಈ ಅಳತೆಪಟ್ಟಿಯನ್ನು 'ಮೀಟರ್ ಟೇಪ್' ಎಂದು ಕರೆಯುತ್ತೇವೆ.

ರಾಮು : **ಒಂದು ಮೀಟರ್ ಎಂದರೆ 100 ಸೆಂ.ಮೀ.ಗಳಿಗೆ ಸಮ.**

1 ಮೀ = 100 ಸೆಂ.ಮೀ. ಆಗಿದೆ. ಉದ್ದದ ಅಳತೆಯ ಆದರ್ಶಮಾನವನ್ನು 'ಮೀಟರ್' ಎಂದು ಕರೆಯುತ್ತಾರೆ.

ರಾಣಿ : ಈ ಅಳತೆ ಟೇಪಿನಿಂದ ನಮ್ಮ ಹಾಗೂ ನಮ್ಮ ಸ್ನೇಹಿತರ ತಲೆಗಳ ಸುತ್ತಳತೆ ಅಳತೆ ಮಾಡೋಣ.

ಸ್ನೇಹಿತರ ಹೆಸರು	ತಲೆಯ ಸುತ್ತಳತೆ (ಸೆಂ.ಮೀ.ಗಳಲ್ಲಿ)

ಟೈಲರ್ : ನಿಮ್ಮ ಮನೆ ಇಲ್ಲಿಂದ ಅಂದಾಜು ಎಷ್ಟು ದೂರ ಇದೆ?

ಪಿಂಟು : ನಮ್ಮ ಮನೆ ಸುಮಾರು 90 ಮೀಟರ್ ದೂರ ಇರಬಹುದು.
90 ಮೀಟರ್ _____ ಸೆಂ.ಮೀ.ಗಳಿಗೆ ಸಮ.

@KTBS NOT TO BE REPUBLISHED

ರಾಣಿ : ಅಷ್ಟು ದೂರವನ್ನು ಮೀಟರ್ ಅಳತೆ ಟೇಪಿನಿಂದ ಅಳೆಯಲು ತುಂಬಾ ಸಮಯ ಬೇಕಾಗಬಹುದು.

ಟೈಲರ್ : ನಿಮ್ಮ ಊಹೆ ಸರಿ ಇದೆ. ನೀವು ಸುಲಭವಾಗಿ ಅಳತೆ ಮಾಡಲು ರಸ್ತೆ ನಿರ್ಮಿಸುವ ಇಂಜಿನಿಯರನ್ನು ಭೇಟಿ ಮಾಡಿರಿ.

ಪಿಂಟು : ಓ! ಇಂಜಿನಿಯರ್ ಅಂಕಲ್ ಇಲ್ಲೇ ಇದ್ದಾರೆ. ಅವರ ಬಳಿ ಹೋಗಿ ತಿಳಿದುಕೊಳ್ಳೋಣ.



ರಾಮು : ಇಂಜಿನಿಯರ್ ಅಂಕಲ್, ನಮ್ಮ ಮನೆಯಿಂದ ಶಾಲೆ ಎಷ್ಟು ದೂರ ಇದೆ ಎಂದು ಸುಲಭವಾಗಿ ಹೇಗೆ ಅಳೆಯುವುದು ಹೇಳುವಿರಾ?

ಇಂಜಿನಿಯರ್ : ಸರಿ ಮಕ್ಕಳೇ, ಖಂಡಿತ ಹೇಳುವೆ. ನೋಡಿ ನನ್ನ ಬಳಿ 100 ಮೀಟರ್ ಉದ್ದದ ಅಳತೆ ಟೇಪ್ ಇದೆ. ಇದರಿಂದ ದೂರವನ್ನು ಅಳೆಯಬಹುದು.



ರಾಮು : ಅಂಕಲ್, 1000 ಮೀಟರ್ ದೂರ ಇದ್ದರೆ ಅದನ್ನು ಹೇಗೆ ಅಳತೆ ಮಾಡುವುದು?

ಇಂಜಿನಿಯರ್: ಈ ನೂರು ಮೀಟರ್ ಅಳತೆ ಟೇಪ್ ಬಳಸಿ ಹತ್ತು ಬಾರಿ ಅಳೆಯಬೇಕು. ಅಂದರೆ **100 × 10 = 1000 ಮೀಟರ್.**

ರಾಣಿ : ದೂರವನ್ನು ಕಿಲೋಮೀಟರ್‌ಗಳಲ್ಲಿ ಅಳೆಯುತ್ತಾರೆ ಅಲ್ವಾ ಅಂಕಲ್.

ಇಂಜಿನಿಯರ್: ಹೌದು ರಾಣಿ, **1000 ಮೀಟರ್ ದೂರವನ್ನು ಒಂದು ಕಿಲೋಮೀಟರ್** ಎಂದು ಕರೆಯುತ್ತೇವೆ. ಅದನ್ನು ನಾವು **1000 ಮೀಟರ್ = 1 ಕಿಲೋಮೀಟರ್** ಅಥವಾ **1 ಕಿ.ಮೀ.** ಎಂದು ಬರೆಯುತ್ತೇವೆ. ಹಾಗಾದರೆ **5 ಕಿ.ಮೀ = _____ ಮೀಟರ್ ಆಗುತ್ತದೆ.**

ರಾಮು : ನಾವೀಗ ಕೆಲವು ಅಳತೆಗಳ ಅಭ್ಯಾಸ ಮಾಡೋಣ. ಇವುಗಳನ್ನು ಅಳೆಯಲು ಬಳಸುವ ಸೂಕ್ತ ಅಳತೆಮಾನ ಆರಿಸಿ ಬರೆಯೋಣ.


ಸೂಚಿಸಿದ ವಸ್ತುಗಳ ಅಳತೆ	ಮೀ/ಸೆಂ.ಮೀ/ಕಿ.ಮೀ.ಗಳಲ್ಲಿ
ಟೇಬಲ್‌ನ ಉದ್ದ	
ನಿಮ್ಮ ಯೂನಿಫಾರಂ ಶರ್ಟ್‌ನ ಉದ್ದ	
ಶಾಲೆಯ ಗೇಟಿನಿಂದ ನಿನ್ನ ತರಗತಿಗಿರುವ ದೂರ	
ನಿಮ್ಮ ಊರಿನಿಂದ ಪಕ್ಕದ ಊರಿನ ದೂರ	
ನಿಮ್ಮ ಎತ್ತರ	
ನಿಮ್ಮ ಸ್ನೇಹಿತರೊಬ್ಬರ ಎತ್ತರ	
ಒಂದು ಕರ್ಚೀಫ್‌ನ ಉದ್ದ ಮತ್ತು ಅಗಲ	

@KTBS NOT TO BE REPUBLISHED

9.2 ಗೋಲಿ ಆಟ



ಮಕ್ಕಳು ಗೋಲಿ ಆಟ ಆಡುತ್ತಿದ್ದಾರೆ. ಕೆಲವರು ಚದುರಿದ ಗೋಲಿಗಳ ನಡುವಿನ ದೂರವನ್ನು ಅಂದಾಜಿಸುತ್ತಿದ್ದಾರೆ. ನಾವು ಗೋಲಿಗಳ ನಡುವೆ ಇರುವ ದೂರವನ್ನು ಅಳತೆ ಪಟ್ಟಿ ಸಹಾಯದಿಂದ ಅಳೆದು, ಗೆರೆ ಎಳೆದು, ಬರೆಯೋಣ.




@KTBS NOT TO BE REPUBLISHED

1. ಬಿ ಮತ್ತು ಸಿ ಗೋಲಿಗಳ ನಡುವಿನ ದೂರ _____
2. ಎ ಮತ್ತು ಎಚ್ ಗೋಲಿಗಳ ನಡುವೆ ದೂರ _____
3. ಯಾವ ಎರಡು ಗೋಲಿಗಳ ನಡುವೆ ಹೆಚ್ಚು ದೂರ ಇದೆ ?____ ಮತ್ತು ____
4. ಅತಿ ಸಮೀಪ ಇರುವ ಎರಡು ಗೋಲಿಗಳು ಯಾವುವು?____ ಮತ್ತು ____

9.3 ಕಪ್ಪೆ ಜಿಗಿತ

ಪಿಂಟು ಮತ್ತು ಚಿಂಟು ತಮ್ಮ ಗೆಳೆಯರೊಂದಿಗೆ ಕಪ್ಪೆ ಜಿಗಿತ ಆಟ ಆಡುತ್ತಿದ್ದಾರೆ. ನಾವೂ ಆಡೋಣ. ನೆಲದ ಮೇಲೆ ಹಾಕಿದ ಗೆರೆಯಿಂದ ಕಪ್ಪೆಯಂತೆ ನಾಲ್ಕು ಬಾರಿ ಒಬ್ಬೊಬ್ಬರೇ ಜಿಗಿಯೋಣ. ಜಿಗಿದ ದೂರವನ್ನು ಅಂದಾಜಿಸಿ, ನಂತರ ದಾರ ಮತ್ತು ಅಳತೆ ಪಟ್ಟಿ / ಟೇಪ್ ಬಳಸಿ ಅಳೆದು ಬರೆಯೋಣ.



ಗೆಳೆಯರ ಹೆಸರು	ಜಿಗಿಯಬಹುದಾದ ಅಂದಾಜು ದೂರ (ಮೀಟರ್‌ಗಳಲ್ಲಿ ಊಹಿಸಿದಾಗ)	ಜಿಗಿದ ನಂತರ ಅಳತೆಪಟ್ಟಿಯಿಂದ ಅಳೆದಾಗ (ಸೆಂ. ಮೀ.)	ಜಿಗಿದ ನಂತರ ಮೀಟರ್ ಟೇಪ್‌ನಲ್ಲಿ ಅಳೆದಾಗ (ಮೀ.)

© KSEEB NOT TO BE REPUBLISHED


9.4 ಅಳತೆಯ ಆಟ

ಬೇಕಾದ ವಸ್ತುಗಳು: ಕಾಗದ, ಸ್ಕೇಲ್, ಬಣ್ಣಬಣ್ಣದ ಸ್ಕೆಚ್‌ಪೆನ್‌ಗಳು ಮತ್ತು ದಾಳ

ಹೀಗೆ ಆಡೋಣ:

* ಇದು ಇಬ್ಬರು ಸೇರಿ ಆಡುವ ಆಟ. ಒಂದು ಕಾಗದದ ಮೇಲೆ ಎರಡು ಬಿಂದುಗಳನ್ನು ಪ್ರತಿಯೊಬ್ಬರಿಗೆ ಒಂದರಂತೆ ಗುರುತಿಸಿಕೊಳ್ಳೋಣ. ಅದು ಪ್ರಾರಂಭ ಮಾಡುವ ಬಿಂದು.
* ಸರದಿಯಂತೆ ದಾಳವನ್ನು ಉರುಳಿಸಿ, ದಾಳದ ಮೇಲ್ಮುಖವಾಗಿ ಕಾಣುವ ಚುಕ್ಕಿಯಷ್ಟು ಸೆಂಟಿಮೀಟರ್ ಉದ್ದದ ಗೆರೆಯನ್ನು ಸ್ಕೇಲ್ ಬಳಸಿ ಯಾವುದೇ ದಿಕ್ಕಿನಲ್ಲಿ ಎಳೆಯಬಹುದು.
* ಎದುರಾಳಿಯ ಪ್ರಾರಂಭದ ಬಿಂದುವನ್ನು ಮುಟ್ಟುವುದು ಗುರಿ. ಮೊದಲು ಮುಟ್ಟಿದವರು ಗೆದ್ದಂತೆ.
* ಎದುರಾಳಿಯ ಗೆರೆಯ ತುದಿಯನ್ನು ನಿಮ್ಮ ಗೆರೆಯಿಂದ ಮುಟ್ಟಿದರೆ ನೀವು ಗೆದ್ದಂತೆ.





@KTBS NOT TO BE REPUBLISHED

9.5 ನಾನೆಷ್ಟು ಭಾರ?

ಪಿಂಕಿ ತನ್ನ ಹುಟ್ಟುಹಬ್ಬಕ್ಕೆ ಲಡ್ಡುಗಳನ್ನು ವಿತರಿಸಲು ಬಯಸುತ್ತಿದ್ದಾಳೆ.



ಲಡ್ಡು ತಯಾರಿಸಲು ಬೇಕಾಗುವ ಸಾಮಗ್ರಿಗಳೇನು?





ಕೆ.ಜಿ. ಎಂದರೇನು?

ಲಡ್ಡು ಮಾಡಲು ಬೇಕಾಗುವ ಸಾಮಗ್ರಿಗಳು

ಕಡಲೆ ಹಿಟ್ಟು – 1 ಕೆ.ಜಿ

ಸಕ್ಕರೆ – 1 ಕೆ.ಜಿ

ಏಲಕ್ಕಿ – 10 ಗ್ರಾಂ

ಗೋಡಂಬಿ 100 ಗ್ರಾಂ

ಒಣದ್ರಾಕ್ಷಿ – 100 ಗ್ರಾಂ

ತುಪ್ಪ – 200 ಗ್ರಾಂ

ವಸ್ತುಗಳ ತೂಕವನ್ನು ಕಿಲೋಗ್ರಾಂ ಗಳಲ್ಲಿ ಅಳತೆ ಮಾಡುತ್ತಾರೆ. ಅದನ್ನು ಕೆ.ಜಿ. (kg) ಎಂದು ಕರೆಯುತ್ತಾರೆ.




ವಸ್ತುಗಳನ್ನು ತೂಕ ಮಾಡಲು ಏನನ್ನು ಬಳಸುತ್ತೇವೆ?



ವಸ್ತುಗಳ ನಿಖರ ತೂಕವನ್ನು ಅಳೆಯಲು ತಕ್ಕಡಿ ಬಳಸುತ್ತೇವೆ..





ತೂಕದ ಬಟ್ಟುಗಳು






ಹೇಗೆ ತೂಕ ಮಾಡುವುದು?



ತೂಕ ಮಾಡಬೇಕಾದ ವಸ್ತುವನ್ನು ತಕ್ಕಡಿಯ ಒಂದು ಕಡೆ, ಇನ್ನೊಂದು ಕಡೆ ತೂಕದ ಬಟ್ಟು ಇಟ್ಟು ಅಳೆಯುತ್ತೇವೆ. ತಕ್ಕಡಿಯ ಮುಳ್ಳು ನೇರವಾಗಿ ಬಂದರೆ ತೂಕ ಸಮತೋಲನವಾಗಿರುವುದು ಕಂಡುಬರುತ್ತದೆ.



© KTBS NOT TO BE REPUBLISHED

ನಿಮಗೆ ಗೊತ್ತಿರಲಿ

1000 ಗ್ರಾಂ.ಗಳು ಸೇರಿದಾಗ 1 ಕಿಲೋ ಗ್ರಾಂ ಅಥವಾ 1 ಕೆ.ಜಿ. ಆಗುತ್ತದೆ.

9.6 ತೂಗಿ ನೋಡು: ತೂಕವನ್ನು ಅಳೆಯಲು ಮಾರುಕಟ್ಟೆಯಲ್ಲಿ ವಿವಿಧ ಬಗೆಯ ತಕ್ಕಡಿಗಳನ್ನು ಬಳಸುತ್ತಾರೆ. ಚಿತ್ರದಲ್ಲಿರುವ ತಕ್ಕಡಿಗಳನ್ನು ನೋಡಿ ಏನೆಲ್ಲಾ ಇದರಲ್ಲಿ ತೂಗಬಹುದು ಎಂಬುದನ್ನು ಚರ್ಚಿಸೋಣ.

















@KTBS NOT TO BE REPUBLISHED

9.7 ಇವುಗಳ ಅಂದಾಜು ತೂಕವನ್ನು ಊಹಿಸಿ, ನಿಖರ ತೂಕವನ್ನು ಅಳೆದು ಬರೆಯೋಣ.

ವಸ್ತುಗಳು	ಅಂದಾಜು ತೂಕ	ನಿಖರ ತೂಕ
		
		
		
		
		
		

@KTBS NOT TO BE REPUBLISHED

9.8 ಇಲ್ಲಿ ಕೆಲವು ವಸ್ತುಗಳ ತೂಕವನ್ನು ನೀಡಲಾಗಿದೆ. ಅವುಗಳನ್ನು ವಸ್ತುಗಳೊಂದಿಗೆ ಗೆರೆ ಎಳೆದು ಹೊಂದಿಸು.

	2 ಕೆ.ಜಿ. (2 ಕಿಲೋ ಗ್ರಾಂ)
	250 ಗ್ರಾಂ.
	2 ಮಿ.ಗ್ರಾಂ. (2 ಮಿಲಿ ಗ್ರಾಂ)
	1 ಕೆ.ಜಿ. (1 ಕಿಲೋ ಗ್ರಾಂ.)
	17 ಗ್ರಾಂ.

@KTBS NOT TO BE REPUBLISHED

9.9 ನಮ್ಮ ತೂಕ ಎಷ್ಟು?

1. ತೂಕ ಮಾಡುವ ಯಂತ್ರ ಬಳಸಿ ತೂಕ ಕಂಡುಹಿಡಿಯೋಣ.

ನನ್ನ ತೂಕ _____

ಸ್ನೇಹಿತರ ತೂಕ ಅಂದಾಜು ಎಷ್ಟು ಇರಬಹುದು? ಊಹಿಸಿ ಬರೆಯೋಣ. ತೂಕದ ಯಂತ್ರದಿಂದ ತೂಕ ಮಾಡಿ, ಬರೆದು ಊಹೆಯನ್ನು ಪರೀಕ್ಷಿಸೋಣ.

ಸ್ನೇಹಿತರ ಹೆಸರು	ಅಂದಾಜು ತೂಕ (ಕಿ.ಗ್ರಾಂ. ಗಳಲ್ಲಿ)	ತೂಕದ ಯಂತ್ರ ಬಳಸಿ ನಿಖರವಾಗಿ ನೋಡಿದ ತೂಕ (ಕಿ.ಗ್ರಾಂ. ಗಳಲ್ಲಿ)

@KTBS NOT TO BE REPUBLISHED

2. ರಾಮವ್ವ ವ್ಯಾಪಾರ ಮಾಡಲು ಮಾರುಕಟ್ಟೆಯಿಂದ ಹೂವುಗಳನ್ನು ತೆಗೆದುಕೊಂಡು ಹೋದಳು. ಆಕೆಯ ಬಳಿ 7kg 300g ಸೇವಂತಿಗೆ ಹೂವು, 5kg, 450g ಗುಲಾಬಿ ಹೂವು ಮತ್ತು 10kg ಸಂಪಿಗೆ ಹೂವು ಇದೆ. ಹಾಗಾದರೆ ರಾಮವ್ವಳ ಬಳಿ ಇರುವ ಹೂವುಗಳ ಒಟ್ಟು ತೂಕ ಎಷ್ಟಾಗುತ್ತದೆ ಎಂದು ನೀನು ಮತ್ತು ನಿನ್ನ ಸ್ನೇಹಿತರು ಸೇರಿ ಕಂಡುಹಿಡಿಯಿರಿ.



ಒಟ್ಟು ತೂಕ = ☐ **kg** ☐ **g**

9.10 ಔತಣಕೂಟ

ಕಿಟ್ಟು ಮತ್ತು ಕಿಟ್ಟಿ ಎಂಬ ಮೊಲಗಳು ತಮ್ಮ ವಿವಾಹ ವಾರ್ಷಿಕೋತ್ಸವ ಆಚರಿಸುತ್ತಿದ್ದಾರೆ. ಎಲ್ಲಾ ಪ್ರಾಣಿಗಳನ್ನು ಸಮಾರಂಭಕ್ಕೆ ಆಹ್ವಾನಿಸಿದ್ದರು. ವಿಶೇಷವಾದ ಪಾಯಸ ತಯಾರಿಸಿದ್ದರು.

ಎಲ್ಲಾ ಪ್ರಾಣಿಗಳು ಜಿಗಿಯುತ್ತ, ಕುಣಿಯುತ್ತ, ಕೆಲವು ತೆವಳುತ್ತಾ ಬಂದವು.

ಆನೆಯು 50 ಲೀಟರ್ ಪಾಯಸ ಕುಡಿಯುತ್ತದೆ.

ಜಿರಾಫೆ _____ ಲೀಟರ್ ಪಾಯಸ ಕುಡಿಯಬಹುದು.

ಆಕಳು _____ ಲೀಟರ್ ಪಾಯಸ ಕುಡಿಯಬಹುದು.



ನರಿ ಹೇಳಿತು – ಅಯ್ಯೋ! ನನಗೆ 1 ಲೀಟರ್ ಪಾಯಸ ಕುಡಿಯಲೂ ಸಾಧ್ಯವಿಲ್ಲ. ದಯಮಾಡಿ ನನಗೆ 500 ಮಿಲಿ ಲೀಟರ್ ಮಾತ್ರ ಕೊಡಿ.

ಕತ್ತೆ ಕೇಳಿತು – 500 ಮಿಲಿ ಲೀಟರ್? ಅದು ಒಂದು ಲೀಟರ್‌ಗಿಂತ ಹೆಚ್ಚು ಅಲ್ಲವೇ?

ನರಿ ಹೇಳಿತು – ಬಾ ಇಲ್ಲಿ, **1 ಲೀಟರ್** ಎಂದರೆ **1000 ಮಿಲಿ ಲೀಟರ್** ಇದನ್ನು ನಾವು **ಮಿ.ಲೀ.** ಎಂದೂ ಬರೆಯುತ್ತೇವೆ. **500 ಮಿ.ಲೀ. ಎಂದರೆ ಅರ್ಧ ಲೀಟರ್** ಆಗುತ್ತದೆ.

ಕಪ್ಪೆ ತನ್ನ ಒಂಬತ್ತು ಜನ ಗೆಳೆಯರೊಂದಿಗೆ ಜಿಗಿಯುತ್ತ ಬಂದು, ಪ್ರತಿಯೊಬ್ಬರಿಗೆ ಕೇವಲ 100 ಮಿ.ಲೀ. ಪಾಯಸ ಸಾಕು ಎಂದಿತು.

© KTBS NOT TO BE REPUBLISHED



ಬೆಕ್ಕು ಹತ್ತು ಲೋಟಗಳಲ್ಲಿ ಪ್ರತಿಯೊಂದಕ್ಕೆ 100 ಮಿ.ಲೀ. ಪಾಯಸ ತುಂಬಿಸಿ ಕಪ್ಪೆಗಳಿಗೆ ಕೊಟ್ಟಿತು. ಎಲ್ಲಾ ಕಪ್ಪೆಗಳು ಪಾಯಸ ಕುಡಿದು ಕುಣಿದು ಕುಪ್ಪಳಿಸಿದವು.




@KTBS NOT TO BE REPUBLISHED

ಕತ್ತೆಗೆ ಗೊಂದಲವಾಗಿ 100 ಮಿ.ಲೀ.ಗಳ ಹತ್ತು ಲೋಟಗಳೇ? ಓಹ್! ಎಷ್ಟೊಂದು ಪಾಯಸ! ಎಂದಿತು.


ನರಿಗೆ ತನ್ನ ಜಾಣತನ ತೋರಿಸುವ ಮತ್ತೊಂದು ಅವಕಾಶದಿಂದಾಗಿ ಹೀಗೆ ಹೇಳಿತು. 100 ಮಿ.ಲೀ. ಪಾಯಸವನ್ನು ಹತ್ತು ಲೋಟಗಳಲ್ಲಿ ಹಾಕಿದರೆ **1000 ಮಿ.ಲೀ. (10 × 100=1000 ಮಿ.ಲೀ.)** ಆಗುತ್ತದೆ. ಅದನ್ನು **1 ಲೀಟರ್** ಎನ್ನುತ್ತಾರೆ.

9.11 ಲೆಕ್ಕ ಮಾಡೋಣ.

1. ಪ್ರಾಣಿಗಳು ಪಾಯಸ ಅಳತೆ ಮಾಡಿದ್ದು ಗೊತ್ತಾಯ್ತು. ಅದೇ ರೀತಿ ಚಿಂಕಿ ಮತ್ತು ಪಿಂಕಿ ಒಂದು ಲೀಟರ್ ಬಾಟಲಿಯಲ್ಲಿ ನೀರನ್ನು ತುಂಬಲು ಬೇರೆ ಬೇರೆ ರೀತಿಯಲ್ಲಿ ಪ್ರಯತ್ನಿಸುತ್ತಿದ್ದಾರೆ. ಅವರಿಗೆ ಸಹಾಯ ಮಾಡೋಣ.



2. ಚಿಂಟು ಬೀಕರುಗಳಲ್ಲಿ ಬಣ್ಣದ ನೀರು ತುಂಬಿಸಿದ್ದಾನೆ. ಯಾವ ಬೀಕರಿನಲ್ಲಿ ಎಷ್ಟು ನೀರು ಇದೆ ಗಮನಿಸಿ ಚೌಕದಲ್ಲಿ ಬರೆಯೋಣ.



© KTBS NOT TO BE REPUBLISHED

3. ನೀಡಿರುವ ಅಳತೆಯನ್ನು ಮಾಪಕದಲ್ಲಿ ಬಣ್ಣ ತುಂಬಿ ಗುರುತಿಸೋಣ.



700ml



300ml



100ml



1000ml



650ml



450ml

4. ಮನೆಯಲ್ಲಿ ದಿನಕ್ಕೆ ಎಷ್ಟು ನೀರು ಬಳಸುತ್ತೀರಿ ಎಂದು ಅಂದಾಜಿಸಿ, ಲೀಟರ್ ಬಾಟಲಿ ಸಹಾಯದಿಂದ ಅಳೆದು ನಿಖರ ಅಳತೆ ಬರೆಯೋಣ.

ವಿವರ	ಅಂದಾಜು ಅಳತೆ	ನಿಖರ ಅಳತೆ
ಕುಡಿಯಲು		
ಸ್ನಾನ ಮಾಡಲು		
ಅಡುಗೆ ಮಾಡಲು		
ಬಟ್ಟೆ ಒಗೆಯಲು		

© KTBS NOT TO BE REPUBLISHED

9.12 ವೈದ್ಯರೊಂದಿಗೆ ಮಾತು

ರಾಹುಲನ ತಂಗಿ ಪಿಂಕಿಗೆ ಹುಷಾರಿಲ್ಲ. ಅವರ ತಂದೆ ಆಕೆಯನ್ನು ವೈದ್ಯರಲ್ಲಿಗೆ ಕರೆದುಕೊಂಡು ಹೋದರು. ರಾಹುಲನೂ ಸಹ ಅವರ ಜೊತೆಗೆ ಹೋದ.



ವೈದ್ಯೆ : ಮಗುವಿಗೆ ತುಂಬಾ ಜ್ವರ ಇದೆ.

ಪಿಂಕಿಯ ತಂದೆ : ಹೌದು ಡಾಕ್ಟ್ರೆ, ಬೆಳಿಗ್ಗೆಯಿಂದ ಜ್ವರ ಬಂದು ಮಲಗಿದ್ದಾಳೆ.

ವೈದ್ಯೆ : ಥರ್ಮಾಮೀಟರ್ ಬಳಸಿ ಜ್ವರ ಎಷ್ಟಿದೆ ನೋಡೋಣ.

ಪಿಂಕಿಯ ತಂದೆ : **ಜ್ವರ ಎಷ್ಟಿದೆ ಡಾಕ್ಟ್ರೆ?**

ವೈದ್ಯೆ : 101 ಡಿಗ್ರಿ ತಾಪ ಇದೆ.

ರಾಹುಲ : ನೀವು ಬಳಸಿದ ವಸ್ತು ಏನದು ಡಾಕ್ಟರ್ ಆಂಟಿ?

ವೈದ್ಯೆ : ಮಗು, ಇದನ್ನು **ಥರ್ಮಾಮೀಟರ್ ಅಥವಾ ತಾಪಮಾಪಕ** ಎಂದು ಕರೆಯುತ್ತೇವೆ.



NOT TO BE REPUBLISHED

ರಾಹುಲ : ನನ್ನ ಮೈ ಎಷ್ಟು ಬಿಸಿ ಇದೆ ನೋಡಿ ಆಂಟಿ.

ವೈದ್ಯೆ : ಸರಿ.. ಇಲ್ಲಿ ಬಾ.. ನೋಡೋಣ. 97 ಡಿಗ್ರಿ ಫ್ಯಾರೆನ್‌ಹೀಟ್ ಇದೆ. ನಿನಗೆ ಜ್ವರ ಇಲ್ಲ.

ರಾಹುಲ : ಡಿಗ್ರಿ ಫ್ಯಾರನ್ ಹೀಟ್ ಅಂದರೇನು ಆಂಟಿ?

ವೈದ್ಯೆ : **ವಸ್ತು ಅಥವಾ ದೇಹ ಎಷ್ಟು ಬಿಸಿ ಇದೆ ಎನ್ನುವುದನ್ನು ಅಳೆಯುವ ಒಂದು ಅಳತೆಮಾನ ಡಿಗ್ರಿ ಫ್ಯಾರನ್ ಹೀಟ್. ತಾಪದ ಅಳತೆಯನ್ನು °F ಎಂದು ಬರೆಯುತ್ತೇವೆ. ಇನ್ನೊಂದು ಅಳತೆ ಮಾನ ಕೂಡ ಇದೆ. ಅದನ್ನು ಡಿಗ್ರಿ ಸೆಲ್ಸಿಯಸ್ ಎಂದು ಕರೆಯುತ್ತೇವೆ. ಅದನ್ನು ನಾವು °C ಎಂದು ಬರೆಯುತ್ತೇವೆ.**



ರಾಹುಲ : ನೀವು ಬಳಸುತ್ತಿರುವ ತಾಪಮಾಪಕ ತೋರಿಸಿ ಡಾಕ್ಟರ್ ಆಂಟಿ.

ವೈದ್ಯೆ : ಇಲ್ಲಿ ನೋಡು ಮಗು.. ಇದನ್ನು ವೈದ್ಯಕೀಯ ತಾಪಮಾಪಕ ಎಂದು ಕರೆಯುತ್ತೇವೆ.

ರಾಹುಲ : ನಾನು ಸ್ನಾನ ಮಾಡುವ ನೀರು ಎಷ್ಟು ಬಿಸಿ ಇದೆ ಎಂದು ಇದರಿಂದ ತಿಳಿಯಬಹುದೇ ಆಂಟಿ ?

ವೈದ್ಯೆ : ಇಲ್ಲ ಮಗು.. ಅದಕ್ಕೆ ಬೇರೆ ತಾಪಮಾಪಕ ಬಳಸಬೇಕು. ಅದು ಇಲ್ಲಿದೆ ನೋಡು.




ರಾಹುಲ : ನಾನೂ ಕೂಡ ತಾಪವನ್ನು ಅಳತೆ ಮಾಡುತ್ತೇನೆ.


© KSEEB NOT TO BE REPUBLISHED

ಲೆಕ್ಕ ಬಿಡಿಸೋಣ.


1. ರಾಹುಲನಿಗೆ ಉಷ್ಣತಾಮಾಪಕದಲ್ಲಿ ಫ್ಯಾರನ್ ಹೀಟ್ ಮತ್ತು ಡಿಗ್ರಿ ಸೆಲ್ಸಿಯಸ್‌ನಲ್ಲಿ ತಾಪವನ್ನು ಗುರುತಿಸಿ ಬರೆಯಲು ಸಹಾಯ ಮಾಡಿರಿ.

1. 


_____ °F

2. 

_____ °C

3. 


_____ °C


4. 


_____ °F


2. ನೀಡಿದ ತಾಪಮಾನವನ್ನು ಡಿಗ್ರಿ ಸೆಲ್ಸಿಯಸ್ ಮತ್ತು ಡಿಗ್ರಿ ಫ್ಯಾರನ್ ಹೀಟ್ ತಾಪಮಾಪಕಗಳಲ್ಲಿ ಬಣ್ಣ ತುಂಬಿ ಗುರುತಿಸಿರಿ.

1. 40°C **2. 50°C** **3. 70°F** **4. 110°F**










NOT TO BE REPUBLISHED @KTBS

9.13 ಒಂದು ದಿನ ಹೇಮಂತ್ ತನ್ನ ಸ್ನೇಹಿತರೊಡನೆ ಶಾಲಾ ಮಾಹಿತಿ ಫಲಕವನ್ನು ಗಮನಿಸಿದ.

ನಿಮಗಿದು ತಿಳಿದಿರಲಿ



ಮೇಲಿನ ಪಟ್ಟಿ ನೋಡಿ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸೋಣ.

1. 1 ಗಂಟೆಗೆ 60 ನಿಮಿಷ ಆದರೆ ಅರ್ಧ ಗಂಟೆಗೆ ಎಷ್ಟು ನಿಮಿಷ? _____
2. 1 ದಿನಕ್ಕೆ 24 ಗಂಟೆಗಳು. 3 ದಿನಗಳಿಗೆ ಒಟ್ಟು ಎಷ್ಟು ಗಂಟೆಗಳು? _____
3. ಸಾರಿಕ ತನ್ನ ಆಫೀಸ್‌ನಲ್ಲಿ ಯಾವುದೇ ರಜೆ ಪಡೆಯದೇ 4 ವಾರ ಕೆಲಸ ಮಾಡುತ್ತಾರೆ. ಅಂದರೆ ಅವರು ಎಷ್ಟು ದಿನ ಕೆಲಸ ಮಾಡಿದಂತೆ ಆಯಿತು? _____
4. ಒಂದು ವರ್ಷದಲ್ಲಿ 365 ದಿನಗಳು ಬರುತ್ತವೆ. ಹಾಗಾದರೆ ಇದೇ ವರ್ಷದ ನವೆಂಬರ್, ಡಿಸೆಂಬರ್, ಜನವರಿ ತಿಂಗಳಲ್ಲಿ ಒಟ್ಟು ಎಷ್ಟು ದಿನಗಳು ಬರುತ್ತವೆ? _____
5. ಶಾಲಾ ಪರೀಕ್ಷೆ ದಿನ ಒಂದು ವಿಷಯದ ಪ್ರಶ್ನೆ ಪತ್ರಿಕೆಗೆ ಉತ್ತರ ಬರೆಯಲು ಒಂದು ಗಂಟೆ ನಿಗದಿ ಪಡಿಸಿದ್ದಾರೆ. ಅಂದರೆ ಎಷ್ಟು ನಿಮಿಷದಲ್ಲಿ ಅದನ್ನು ಪೂರ್ಣಗೊಳಿಸಬೇಕು? _____
6. ನಿಮ್ಮ ಊರಿನಿಂದ ಬೆಂಗಳೂರಿಗೆ ಪ್ರಯಾಣಿಸಲು ಎಷ್ಟು ಗಂಟೆ ಎಷ್ಟು ನಿಮಿಷಗಳು ಬೇಕಾಗುತ್ತದೆ ಎಂದು ಹಿರಿಯರೊಡನೆ ಚರ್ಚಿಸಿ. _____

©KTBS NOT TO BE REPUBLISHED

9.14 ನಿನ್ನ ದಿನನಿತ್ಯದ ಕೆಲಸಗಳ ಸಮಯವನ್ನು ಗಡಿಯಾರದಲ್ಲಿ ಮುಳ್ಳುಗಳ ಮೂಲಕ ಸೂಚಿಸಿ ವಿವರ ಬರೆ.

ಮಾದರಿ: 6 ಗಂಟೆ 30 ನಿಮಿಷ		ನಾನು ಹಲ್ಲುಜ್ಜುವೆ.
		
		
		

© DSERT NOT TO BE REPUBLISHED

9.15 ಈ ಕೆಳಗಿನ ಚಟುವಟಿಕೆಗಳನ್ನು ಗಮನಿಸಿ ಪೂರ್ವಾಹ್ನ (am) ಅಪರಾಹ್ನ (pm) ಎಂದು ಖಾಲಿ ಸ್ಥಳದಲ್ಲಿ ಬರೆಯಿರಿ.

@KTBS NOT TO BE REPUBLISHED

9.16 ಯಾವುದಕ್ಕೆ ಎಷ್ಟು ಸಮಯ?

ಸನ್ನಿವೇಶ ಮತ್ತು ವಿವರವನ್ನು ಗಮನಿಸು. ಈ ಕ್ರಿಯೆ ನಡೆಯಲು ಎಷ್ಟು ಸಮಯ ಬೇಕಾಗಬಹುದೆಂದು ಅಂದಾಜಿಸಿ ಸಮಯವನ್ನು ಬರೆ.

ಸನ್ನಿವೇಶ	ವಿವರ	ತೆಗೆದುಕೊಳ್ಳುವ ಸಮಯ
	ಹಾಲು ಮೊಸರಾಗಿ ತುಪ್ಪವಾಗಲು	
	ಒಗೆದ ಬಟ್ಟೆ ಒಣಗಿಕೊಳ್ಳಲು	
	ನಿಂಬೆ ಹಣ್ಣಿನ ಪಾನಕ ತಯಾರು ಮಾಡಲು	
	ಬೀಜವೊಂದು ಮೊಳಕೆಯೊಡಲು	
	ಮೊಗ್ಗು ಹೂವಾಗಿ ಅರಳಲು	

@KTBS NOT TO BE REPUBLISHED

9.17 ಕ್ಯಾಲೆಂಡರ್ ಬಳಸೋಣ.

ಕ್ಯಾಲೆಂಡರ್ ನೋಡಿ ಪ್ರಶ್ನೆಗಳಿಗೆ ಉತ್ತರಿಸೋಣ.

ನವೆಂಬರ್ 2025						
ಭಾನುವಾರ	ಸೋಮವಾರ	ಮಂಗಳವಾರ	ಬುಧವಾರ	ಗುರುವಾರ	ಶುಕ್ರವಾರ	ಶನಿವಾರ
						1 ಕನ್ನಡ ರಾಜ್ಯೋತ್ಸವ
2	3	4	5	6	7	8
9	10	11	12	13	14	15
16	17	18	19	20	21	22
23	24	25	26	27	28	29
30						

@KTBS NOT TO BE REPUBLISHED

1. ಈ ಕ್ಯಾಲೆಂಡರ್‌ನಲ್ಲಿ ಕೆಂಪು ಬಣ್ಣದಲ್ಲಿ ಸೂಚಿಸಿರುವ ಸಂಖ್ಯೆಗಳು ಏನನ್ನು ಹೇಳುತ್ತವೆ? _____
2. ಈ ತಿಂಗಳಿನಲ್ಲಿರುವ ಶನಿವಾರಗಳ ದಿನಾಂಕಗಳು ಯಾವುವು? _____
3. ಶನಿವಾರದ ಮುಂದೆ 1ರ ದಿನಾಂಕವಿದೆ. ಅದರಲ್ಲೇನೋ ವಿಶೇಷವಿದೆ. ಅದು ಯಾವುದು? _____
4. ಈ ತಿಂಗಳಿನ ಕ್ಯಾಲೆಂಡರ್‌ನಲ್ಲಿ ನಿನ್ನ ಸ್ನೇಹಿತರ ಹುಟ್ಟುಹಬ್ಬ ಏನಾದರೂ ಬರುವುದೇ? ತಿಳಿದು ಗುರುತು ಹಾಕು.
5. ಈ ತಿಂಗಳಿನ ಭಾನುವಾರಗಳ ಎಲ್ಲಾ ದಿನಾಂಕಗಳನ್ನು ಕೂಡಿದರೆ ಮೊತ್ತ ಎಷ್ಟಾಗುತ್ತದೆ? _____
6. ನವೆಂಬರ್ ತಿಂಗಳಿನಲ್ಲಿ ಬರುವ ಇನ್ನಿತರೆ ವಿಶೇಷ ದಿನಗಳಿದ್ದಲ್ಲಿ ಸ್ನೇಹಿತರೊಂದಿಗೆ ಚರ್ಚಿಸಿ ಬರೆ. _____

10 ಮಾಹಿತಿ ಕಣಜ

10.1 ಎರಡು ಬಣ್ಣದ ಚಿಟ್ಟೆಗಳು ಟಾಮಿಯ ಮನೆಯ ಮುಂದಿರುವ ಹೂವುಗಳ ಕುರಿತು ಮಾತುಕತೆ ನಡೆಸುತ್ತಿವೆ.





ನನ್ನ ಗೆಳೆಯ ಟಾಮಿ ತನ್ನ ಮನೆಯ ಮುಂದೆ ಬಣ್ಣ ಬಣ್ಣದ ಹೂವಿನ ಗಿಡಗಳನ್ನು ಬೆಳೆಸಿದ್ದಾನೆ.



ಗಿಡದಲ್ಲಿರುವ ಹೂವುಗಳನ್ನು ಎಣಿಸೋಣವೇ?



ಇಷ್ಟೊಂದು ಹೂವುಗಳನ್ನು ಎಣಿಸಲು ಯಾವುದಾದರೂ ಸುಲಭ ವಿಧಾನ ಇದೆಯಾ?



ಹೌದು. ಗೀಟುಗಳನ್ನು ಹಾಕಿ ಸುಲಭವಾಗಿ ಎಣಿಸುವುದು ಹೇಗೆಂದು ತಿಳಿಯೋಣ.



© NCERT NOT TO BE REPUBLISHED

ಸಂಖ್ಯೆ ಮತ್ತು ಗೀಟುಗಳು :

ಸಂಖ್ಯೆ	ಗೀಟುಗಳು
1.	|
2.	||
3.	|||
4.	||||
5.	𝍸

ಸಂಖ್ಯೆ	ಗೀಟುಗಳು
6.	𝍸 |
7.	𝍸 ||
8.	𝍸 |||
9.	𝍸 ||||
10	𝍸 𝍸

ಟಾಮಿಯ ಹೂವಿನ ತೋಟದಲ್ಲಿದ್ದ ಹಳದಿ ಹೂವಿಗೆ ಗೀಟುಗಳನ್ನು ಎಳೆದಿರುವಂತೆ ಉಳಿದ ಹೂಗಳನ್ನು ಎಣಿಸಿ ಗೀಟುಗಳನ್ನು ಎಳೆಯೋಣ.

ಕ್ರ.ಸ.	ಹೂವುಗಳು	ಗೀಟುಗಳು	ಒಟ್ಟು ಸಂಖ್ಯೆ
1		𝍸 |||	8
2			
3			
4			
ಒಟ್ಟು ಹೂಗಳು			

@KTBS NOT TO BE REPUBLISHED

* ನನಗೆ ಅರ್ಥವಾಗಿದೆ ☐
* ನನಗೆ ಸಹಾಯ ಬೇಕಿದೆ ☐

ಶಿಕ್ಷಕರ ಸಹಿ :
ದಿನಾಂಕ :

10.2. ತರಗತಿಗೆ ಬರುವಾಗ ಶಾಲೆಯ ಅಥವಾ ಮನೆಯ ಸುತ್ತಮುತ್ತ ಲಭ್ಯವಿರುವ ವಿಭಿನ್ನ ಆಕಾರದ ಒಣಗಿ ಬಿದ್ದಿರುವ ಎಲೆಗಳನ್ನು ಸಂಗ್ರಹಿಸಿ ತರೋಣ. ಆಯ್ದು ತಂದ ಎಲೆಗಳನ್ನು ಆಕಾರಗಳ ಆಧಾರದಲ್ಲಿ ವಿಂಗಡಿಸಿ, ಅವುಗಳ ಲೆಕ್ಕವನ್ನು ಗೀಟು ಮತ್ತು ಸಂಖ್ಯೆಗಳಲ್ಲಿ ಬರೆಯೋಣ.

ವಿವಿಧ ರೂಪದ ಎಲೆಗಳು	ಗೀಟುಗಳು	ಎಲೆಗಳ ಸಂಖ್ಯೆ
ಚೂಪಾದ ಎಲೆಗಳು		
ದುಂಡಾಗಿ ಕಾಣುವ ಎಲೆಗಳು		
ಗೊಂಚಲು ಎಲೆಗಳು		
ಅಗಲವಾದ ಎಲೆಗಳು		
ಉದ್ದವಾದ ಎಲೆಗಳು		
ಇತರೆ ಆಕಾರದ ಎಲೆಗಳು		
ಒಟ್ಟು ಎಲೆಗಳು		

@KTBS NOT TO BE REPUBLISHED

ನೀವು ಸಂಗ್ರಹಿಸಿದ ಮಾಹಿತಿ ಆಧಾರದ ಮೇಲೆ ಪ್ರಶ್ನೆಗಳಿಗೆ ಉತ್ತರಿಸೋಣ.

1. ಯಾವ ಆಕಾರದ ಎಲೆಗಳು ಹೆಚ್ಚಾಗಿವೆ?

_____

2. ಯಾವ ಆಕಾರದ ಎಲೆಗಳು ಅತೀ ಕಡಿಮೆ ಇವೆ?

_____

10.3 ಚಿತ್ರಗಳನ್ನು ಗಮನಿಸೋಣ, ದತ್ತಾಂಶಗಳನ್ನು ವರ್ಗೀಕರಿಸಿ ವಿಶ್ಲೇಷಿಸೋಣ.

					
ಒಟ್ಟು ಎಲೆಗಳು ಗೀಟುಗಳಲ್ಲಿ					
ಸಂಖ್ಯಾ ರೂಪದಲ್ಲಿ					

@KTBS NOT TO BE REPUBLISHED

ಗಮನಿಸಿದ ದತ್ತಾಂಶಗಳ ಆಧಾರದ ಮೇಲೆ ಪ್ರಶ್ನೆಗಳಿಗೆ ಉತ್ತರಿಸೋಣ.

1.  ಇಂತಹ ಎಲೆಗಳ ಒಟ್ಟು ಸಂಖ್ಯೆ. _____

2 .  ಈ ಎಲೆಗಳು  ಈ ಎಲೆಗಳಿಗಿಂತ ಹೆಚ್ಚಾಗಿದೆಯೆ?

_____ (ಹೌದು/ಇಲ್ಲ)

3.  ಈ ಆಕಾರದ ಎಲೆಗಳ ಒಟ್ಟು ಸಂಖ್ಯೆ _____

4.  ಈ ಆಕಾರದ ಎಲೆಗಳು  ಈ ಆಕಾರದ ಎಲೆಗಳ ಸಂಖ್ಯೆಗಿಂತ ಕಡಿಮೆ ಇವೆಯೆ? _____ (ಹೌದು/ಇಲ್ಲ)

5. ಸಂಖ್ಯೆಗಳ ಏರಿಕೆ ಕ್ರಮಕ್ಕೆ ಅನುಗುಣವಾಗಿ ಎಲೆಗಳ ಒಂದೊಂದು ಚಿತ್ರ ಬಿಡಿಸೋಣ.

@KTBS NOT TO BE REPUBLISHED

10.4 ಪರಿಸರ ಮಿತ್ರ ಪ್ರಶಸ್ತಿಗಾಗಿ ಒಂದು ಸರ್ಕಾರಿ ಶಾಲೆಗೆ ಆಯ್ಕೆ ಸಮಿತಿಯು ಭೇಟಿ ನೀಡಿ ಶಾಲಾ ಮೈದಾನದಲ್ಲಿದ್ದ ಗಿಡ–ಮರಗಳ ಅಧ್ಯಯನ ನಡೆಸಿ ಈ ಕೆಳಗಿನಂತೆ ವರದಿ ನೀಡಿದೆ.



ಅಧ್ಯಯನದ ಪ್ರಕಾರ ಲಭ್ಯವಿದ್ದ ಮರಗಳ ವಿವರ:

ಬೇವಿನ ಮರಗಳು 26, ರೈನ್‌ಟ್ರೀ –2, ತೇಗದ ಮರ–6, ಜಾಲಿಮರ–1, ಪಪ್ಪಾಯ–10, ಬಿದಿರು–1, ಸೀಬೆ–12 ನೀಲಗಿರಿ–2. ಕುಂಬಳಕಾಯಿ ಬಳ್ಳಿ–5, ಹೀರೆ ಬಳ್ಳಿ–4, ತೊಂಡೆಕಾಯಿ ಬಳ್ಳಿ–2, ಸೋರೆಕಾಯಿ ಬಳ್ಳಿ–5







ಕಾಂಡಗಳ ಹೊರಮೈ ಲಕ್ಷಣದ ಆಧಾರದ ಮೇಲೆ ವಿಂಗಡಣೆ.

ಒರಟು ಮೇಲ್ಮೈ ಹೊಂದಿರುವ ಮರಗಳು	ಮೃದುಕಾಂಡ ಹೊಂದಿರುವ ಬಳ್ಳಿ ಸಸ್ಯಗಳು	ಟೊಳ್ಳಾದ ಕಾಂಡ ಹೊಂದಿರುವ ಗಿಡಮರಗಳು	ನುಣುಪು ಮೇಲ್ಮೈ ಹೊಂದಿರುವ ಮರಗಳು
ಬೇವಿನ ಮರ, ರೈನ್ ಟ್ರೀ, ತೇಗದ ಮರ, ಜಾಲಿ ಮರ.	ಕುಂಬಳಕಾಯಿ ಬಳ್ಳಿ, ಹೀರೆ ಬಳ್ಳಿ, ತೊಂಡೆಕಾಯಿ ಬಳ್ಳಿ, ಸೋರೆಕಾಯಿ ಬಳ್ಳಿ	ಪಪ್ಪಾಯ, ಬಿದಿರು	ನೀಲಗಿರಿ ಮರ, ಸೀಬೆ ಮರ

ಮಾದರಿಯಂತೆ ಕಾಂಡಗಳ ಸ್ವರೂಪದ ಆಧಾರದ ಮೇಲೆ ಗಿಡ–ಮರಗಳನ್ನು ವರ್ಗೀಕರಿಸಿ, ಕೋಷ್ಟಕದಲ್ಲಿ ಮಾಹಿತಿ ತುಂಬೋಣ.

ಕ್ರ.ಸಂ	ವಿವಿಧ ಸ್ವರೂಪದ ಕಾಂಡಗಳು	ಒಟ್ಟು ಸಂಖ್ಯೆ
1	ಒರಟು ಮೇಲ್ಮೈ ಹೊಂದಿರುವ ಒಟ್ಟು ಮರಗಳು	35
2	ಟೊಳ್ಳಾದ ಕಾಂಡ ಹೊಂದಿರುವ ಒಟ್ಟು ಗಿಡಮರಗಳು	
3	ಮೃದು ಕಾಂಡ ಹೊಂದಿರುವ ಒಟ್ಟು ಬಳ್ಳಿ ಸಸ್ಯಗಳು	
4	ನುಣುಪು ಮೇಲ್ಮೈ ಹೊಂದಿರುವ ಒಟ್ಟು ಮರಗಳು	
	ಒಟ್ಟು	

©KTBS NOT TO BE REPUBLISHED

ಕೋಷ್ಟಕವನ್ನು ಗಮನಿಸಿ ಗೆಳೆಯರೊಂದಿಗೆ ಚರ್ಚಿಸಿ ಪ್ರಶ್ನೆಗಳಿಗೆ ಉತ್ತರಿಸೋಣ.

1. ಯಾವ ಪ್ರಕಾರದ ಕಾಂಡಗಳನ್ನು ಹೊಂದಿರುವ ಗಿಡ ಮರಗಳು ಹೆಚ್ಚಾಗಿವೆ?

ಉ: _____

2. ಬಳ್ಳಿ ಸಸ್ಯಗಳ ಒಟ್ಟು ಸಂಖ್ಯೆ ಎಷ್ಟು?

ಉ: _____

3. ಶಾಲಾ ಆವರಣದಲ್ಲಿ ಕಂಡುಬಂದ ಒಟ್ಟು ಗಿಡ ಬಳ್ಳಿ ಮತ್ತು ಮರಗಳ ಸಂಖ್ಯೆ ಗುರುತಿಸಿ ಸರಿ ಉತ್ತರಕ್ಕೆ (✓) ಹಾಕಿ

(1) 60 (2) 77 (3) 42 (4) 72

4. ಯಾವ ಬಳ್ಳಿ ಸಸ್ಯಗಳು ಸಮಸಂಖ್ಯೆಯಲ್ಲಿವೆ. ಸರಿ ಉತ್ತರಕ್ಕೆ (✓) ಹಾಕಿ

(1) ಕುಂಬಳ ಮತ್ತು ಹೀರೆ

(2) ತೊಂಡೆ ಮತ್ತು ಸೋರೆ

(3) ಕುಂಬಳ ಮತ್ತು ಸೋರೆ

(4) ತೊಂಡೆ ಮತ್ತು ಹೀರೆ

10.5 ಚಿತ್ರ ಸಂಕೇತಗಳ ಮೂಲಕ ದತ್ತಾಂಶ ನಿರ್ವಹಣೆ :



ದತ್ತಾಂಶಗಳನ್ನು ಗೀಟುಗಳಲ್ಲದೆ ಬೇರೆ ರೀತಿಯಲ್ಲಿ ನಿರೂಪಿಸಬಹುದಾ?




ಹೌದು. ನಿರ್ದಿಷ್ಟವಾದ ಅಳತೆ ಪ್ರಮಾಣಗಳಲ್ಲದೆ ಬದಲಿ ಚಿತ್ರ ಸಂಕೇತಗಳ ಮೂಲಕವೂ ನಿರೂಪಿಸಬಹುದು. ಮನೆಯೊಂದರಲ್ಲಿ ಕೆಲವು ಸಾಕು ಪ್ರಾಣಿಗಳಿವೆ. ಅವುಗಳ ದತ್ತಾಂಶವನ್ನು ಪ್ರಮಾಣ ಹಾಗೂ ಚಿತ್ರ ಸಂಕೇತ ಮೂಲಕ ಹೀಗೆ ತಿಳಿಯಬಹುದು.

ಉದಾ:

ಪ್ರಮಾಣದಲ್ಲಿ ಒಂದು ▲ ಎಂದರೆ 5 ಪ್ರಾಣಿಗಳು ಎಂದು ಅರ್ಥ ಮಾಡಿಕೊಳ್ಳೋಣ. ಈ ಅರ್ಥದ ಆಧಾರದ ಮೇಲೆ ಮುಂದಿನ ಕೋಷ್ಟಕವನ್ನು ಪೂರ್ಣಗೊಳಿಸೋಣ.

@KTBS NOT TO BE REPUBLISHED

ಕ್ರ.ಸಂ	ಪ್ರಾಣಿಗಳು	ಸಂಕೇತಗಳು	ಸಂಖ್ಯಾರೂಪ
1	ಹಸು		20
2	ಬೆಕ್ಕು		
3	ಎಮ್ಮೆ		
4	ಕುರಿ		

@KTBS NOT TO BE REPUBLISHED

- **ಕೋಷ್ಟಕದ ಮಾಹಿತಿಯನ್ನು ಗಮನಿಸಿ ಸರಿಯಾದ ಉತ್ತರಕ್ಕೆ ಸರಿ (✓) ಗುರುತನ್ನು ಹಾಕೋಣ.**

1. ಕುರಿಗಳ ಒಟ್ಟು ಸಂಖ್ಯೆ.

(A) 8 (B) 52 (C) 5 (D) 25

2. ಯಾವ ಸಂಖ್ಯೆಯ ಪ್ರಾಣಿಗಳು ಸಮನಾಗಿವೆ?

(A) ಹಸುಗಳು ಮತ್ತು ಎಮ್ಮೆಗಳು (B) ಕುರಿಗಳು ಮತ್ತು ಹಸುಗಳು

(C) ಹಸುಗಳು ಮತ್ತು ಬೆಕ್ಕುಗಳು (D) ಬೆಕ್ಕುಗಳು ಮತ್ತು ಕುರಿಗಳು

3. ಎಲ್ಲಕ್ಕಿಂತ ಹೆಚ್ಚಾಗಿರುವ ಪ್ರಾಣಿಗಳು.

(A) ಎಮ್ಮೆಗಳು (B) ಕುರಿಗಳು (C) ಹಸುಗಳು (D) ಬೆಕ್ಕುಗಳು

10.6 ಪ್ರಮಾಣ ಆಧರಿಸಿ ವಿಶ್ಲೇಷಣೆ ಮಾಡೋಣ.

ಪ್ರಮಾಣ –  = 2 ಪಕ್ಷಿಗಳು.

ಕ್ರ.ಸಂ	ಪ್ರಾಣಿಗಳು	ಸಂಕೇತಗಳು	ಸಂಖ್ಯಾರೂಪ
1.	ನವಿಲು		
2.	ಕೋಗಿಲೆ		
3.	ಗಿಳಿ		
4.	ಪಾರಿವಾಳ		

@KTBS NOT TO BE REPUBLISHED

- **ಕೋಷ್ಟಕದ ಮಾಹಿತಿಯನ್ನು ಗಮನಿಸಿ ಸರಿಯಾದ ಉತ್ತರವನ್ನು ಆರಿಸಿ ಬರೆಯೋಣ**

1. ಗಿಳಿಗಳ ಒಟ್ಟು ಸಂಖ್ಯೆ _____

(A) 10 (B) 6 (C) 20 (D) 5

2. ಯಾವ ಸಂಖ್ಯೆಯ ಪ್ರಾಣಿಗಳು ಸಮನಾಗಿವೆ?_____

(A) ಗಿಳಿಗಳು ಮತ್ತು ನವಿಲುಗಳು

(B) ನವಿಲುಗಳು ಮತ್ತು ಪಾರಿವಾಳಗಳು

(C) ಕೋಗಿಲೆಗಳು ಮತ್ತು ಗಿಳಿಗಳು

(D) ಕೋಗಿಲೆಗಳು ಮತ್ತು ಪಾರಿವಾಳಗಳು

ಮೈಲಿಗಲ್ಲು	ಮೌಲ್ಯಾಂಕನ – ಸೂಚಿತ ಕಲಿಕಾಫಲಗಳು ಭಾಗ–2	ಮಾಹೆ	ಮೌ.ವಿಧ	
5 ಕಳೆಯುವ ಹೋಜು	– ವ್ಯತ್ಯಾಸ 999 ಮೀರದಂತೆ ಸೂಚನೆಗಳನ್ನು ಅನುಸರಿಸಿ ವ್ಯವಕಲನ ಮಾಡುವರು ಹಾಗೂ ನಿತ್ಯ ಜೀವನದ ಸಮಸ್ಯೆ/ ಸನ್ನಿವೇಶಗಳಲ್ಲಿ ಅನ್ವಯಿಸುವರು. – ಮೂರಂಕಿಯ ಸಂಖ್ಯೆಗಳಲ್ಲಿ ಸಂಕಲನ ಮತ್ತು ವ್ಯವಕಲನ ಮಾಡುವರು ಹಾಗೂ ನಿತ್ಯಜೀವನ ಸಮಸ್ಯೆ/ಸನ್ನಿವೇಶಗಳಲ್ಲಿ ಅನ್ವಯಿಸುವರು. – ಒಂದು ಸನ್ನಿವೇಶ/ಸಂದರ್ಭದಲ್ಲಿ ಸಮಸ್ಯೆಗಳನ್ನು ಪರಿಹರಿಸಲು ಸೂಕ್ತವಾದಕ್ರಿಯೆಯನ್ನು ನಿರ್ಧರಿಸುವರು ಮತ್ತು ಅನ್ವಯಿಸುವರು.ಉದಾ:ಸಂಕಲನ, ವ್ಯವಕಲನ. – ಗುಂಪು ಮಾಡಿ ಅಥವಾ ಮಾಡದೇ ಸಣ್ಣ ಮೊತ್ತವನ್ನು – (ರೂ500 ರವರೆಗೆ) ಕೂಡಿಸುವರು ಮತ್ತು ಕಳೆಯುವರು. – ನಿತ್ಯಜೀವನದ ಸನ್ನಿವೇಶಗಳ ಸಮಸ್ಯೆಗಳನ್ನು ಪರಿಹರಿಸುವ ಕೌಶಲ ಪ್ರದರ್ಶಿಸುವರು. – ಜಲಮಾಲಿನ್ಯ ಮತ್ತು ವಾಯುಮಾಲಿನ್ಯ, ಮರಗಳನ್ನು ಕಡಿಯುವುದು,ಪ್ರಾಣಿ/ಪಕ್ಷಿಗಳಿಗೆ ನೋವುಂಟು ಮಾಡುವುದು ಮುಂತಾದ ಜಾಗೃತಿ, ಅರಿವು ಮತ್ತು ಸಂವೇದನೆಯೊಂದಿಗೆ ಪರಿಸರದ ಕಾಳಜಿಯನ್ನು ಪ್ರದರ್ಶಿಸುವರು.	ಅಕ್ಟೋಬರ್ – ನವೆಂಬರ್	ರೂ.ಮೌ–3	ಸಂಕಲನಾತ್ಮಕ ಮೌಲ್ಯಮಾಪನ
6. ಗುಣಿತದ ಕುಣಿತ	– 5 ರಿಂದ. 10 ರವರೆಗೆ ಗುಣಾಕಾರ ಮಗ್ಗಿ ಕೋಷ್ಟಕ ರಚಿಸುವರು ಮತ್ತು ನಿತ್ಯಜೀವನದ ಸನ್ನಿವೇಶಗಳಲ್ಲಿ ಅನ್ವಯಿಸುವರು. – ಸೊನ್ನೆ ಬಳಕೆಯ ನಿಯಮಗಳನ್ನು ಸಂಕಲನ, ವ್ಯವಕಲನ, ಗುಣಾಕಾರ ಕ್ರಿಯೆಗಳಲ್ಲಿ ಅನ್ವಯಿಸುವರು. – 1000ದ ವರೆಗಿನ ಸಂಖ್ಯಾಕೋಷ್ಟಕ, ಗುಣಾಕಾರ ಕೋಷ್ಟಕಗಳಲ್ಲಿ ಮೂರು ಅಂಕಿ ಸಂಖ್ಯೆಗಳ ವಿನ್ಯಾಸ ಗಮನಿಸುವರು, ವಿಸ್ತರಿಸುವರು ಮತ್ತು ಸಾಮಾನ್ಯೀಕರಿಸುವರು.	ನವೆಂಬರ್		
7. ಹಂಚಿ ಕೊಳ್ಳೋಣ	– ಸಮಗುಂಪಿನ ವಿಭಜನೆಯ ಅರ್ಥವನ್ನು ವಿವರಿಸುವರು ಮತ್ತು ಪುನರಾವರ್ತನೆ ವ್ಯವಕಲನದಿಂದ ಅದನ್ನು ಕಂಡುಕೊಳ್ಳುವರು. ಉದಾ: 12/3. 12ನ್ನು 3 ರಿಂದ ಭಾಗಿಸುವುದು ಎಂದರೆ 12 ರಲ್ಲಿ 4 ಸಲ 3ನ್ನು ಕಳೆದು 4 ಭಾಗವೆಂದು ತಿಳಿಯುವುದು.	ಡಿಸೆಂಬರ್	ರೂ.ಮೌ–2	
8. ಪೂರ್ಣ–ಸಮಭಾಗಗಳು	– ಪೂರ್ಣ ಕಾಗದವನ್ನು ಮಡಚುವುದರ ಮೂಲಕ 1/2, 1/4, 3/4 ಭಾಗಗಳನ್ನು ಗುರುತಿಸುವರು.	ಜನವರಿ		

© KTBS NOT TO BE REPUBLISHED

ಮೈಲಿಗಲ್ಲು	ಮೌಲ್ಯಾಂಕನ – ಸೂಚಿತ ಕಲಿಕಾಫಲಗಳು ಭಾಗ–2	ಮಾಹೆ	ಮೌ.ವಿಧ	
9. ಅಳೆಯೋಣ–ತೂಗೋಣ	– ಉದ್ದ ಮತ್ತು ದೂರವನ್ನು ಅಂದಾಜು ಮಾಡುವರು ಮತ್ತು ಔಪಚಾರಿಕ ಅಳತೆ ಮಾನಗಳಾದ ಸೆಂ.ಮೀ/ಮೀ ಬಳಸಿಕೊಂಡು ಅಳೆಯುವರು ಮತ್ತು ಅವುಗಳ ನಡುವಿನ ಸಂಬಂಧವನ್ನು ಗುರುತಿಸುವರು. – ದೈನಂದಿನ ಸಂದರ್ಭದಲ್ಲಿ ವಸ್ತುಗಳನ್ನು ಸರಳ ತಕ್ಕಡಿ ಬಳಸಿ ಔಪಚಾರಿಕ ಅಳತೆಮಾನಗಳಾದ ಗ್ರಾಂ, ಕಿ.ಗ್ರಾಂ ಗಳಲ್ಲಿ ಅಳೆಯುವರು. – ಲೀಟರ್ ಅಳತೆಮಾನಗಳಲ್ಲಿ ಧಾರಕದ ಸಾಮರ್ಥ್ಯವನ್ನು ಅಂದಾಜಿಸುವರು ಮತ್ತು ಅಳೆತಯುವರು.ಉದಾ:ಒಂದು ಲೀಟರ್ ನ 15 ಬಾಟಲಿಗಳಿಂದ ಒಂದು ಬಕೇಟ್ ತುಂಬಬಹುದು. – ಪ್ರಯೋಗ ಮತ್ತು ಪರಿಶೋಧನೆಯಲ್ಲಿ ಆಸಕ್ತಿ, ಕುತೂಹಲ ಮತ್ತು ವೈಜ್ಞಾನಿಕ ಚಿಂತನೆಯನ್ನು ಪ್ರದರ್ಶಿಸಿ ವಿವರಿಸುವುದು. – ಥರ್ಮಾಮೀಟರ್ ಬಳಸಿಕೊಂಡು ತಾಪಮಾನ ಅಳೆಯುವರು. – ಘಟನೆಗಳು ತೆಗೆದುಕೊಳ್ಳುವ ಕಾಲಾವಧಿ, ದಿನ, ತಿಂಗಳು ಮತ್ತು ಗಂಟೆಗಳನ್ನು ಆದರಿಸಿ ಕ್ರಮಾನುಗತವಾಗಿ ಜೋಡಿಸುವರು. – ಕ್ಯಾಲೆಂಡರ್ ನಲ್ಲಿ ನಿರ್ದಿಷ್ಟ ದಿನಾಂಕ ಮತ್ತು ವಾರವನ್ನು ಗುರುತಿಸುವರು.	ಫೆಬ್ರವರಿ – ಮಾರ್ಚ್		ಸಂಕಲನಾತ್ಮಕ ಮೌಲ್ಯಮಾಪನ
10.ಮಾಪಿ ಕಣ್ಣು	– ತನ್ನ ಸುತ್ತಲಿನ ಸಸ್ಯಗಳನ್ನು ಎಲೆ, ಕಾಂಡ ಮತ್ತು ತೊಗಟೆಗಳು ಪ್ರಾಣಿ–ಪಕ್ಷಿಗಳಲ್ಲಿ ವೀಕ್ಷಿಸಬಹುದಾದ ಸೂಕ್ಷ್ಮತೆಯನ್ನು ಗುರುತಿಸಿ ವಿವರಿಸುವರು. – ಚಿತ್ರಗಳು ಮತ್ತು ಗೀಟುಗಳಿಂದ ಸಂಕೇತಿಸಿ ದತ್ತಾಂಶ ದಾಖಲಿಸುವರು ಮತ್ತು ತೀರ್ಮಾನಗಳನ್ನುತೆಗೆದುಕೊಳ್ಳುವರು. – ದೈನಂದಿನ ಸನ್ನಿವೇಶದಲ್ಲಿ ಹೊಸ ತಂತ್ರಜ್ಞಾನ ಕುರಿತು ಜ್ಞಾನವನ್ನು ಅನ್ವಯಿಸುವರು.	ಮಾರ್ಚ್	ಸಂ.ಮೌ – 2	

ಎಲ್ಲಾ ಕಲಿಕಾ ಫಲಗಳನ್ನು ಸಂ– 2ರ ಮೌಲ್ಯಾಂಕನಕ್ಕೆ ಪರಿಗಣಿಸುವುದು.

© KTBS NOT TO BE REPUBLISHED